ಕಾರ್ಯಸೂಚಿ– 03

# ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್

ನಂ. 658/2ಎ, ಎರಡನೇ ಮಹಡಿ, ಶ್ರೀ ಕೃಷ್ಣ ಕಾಂಪ್ಲೆಕ್ಸ್, ಬಸೆಟ್ಟಿಪೇಟೆ, ಚಿಕ್ಕಪೇಟೆ ಕ್ರಾಸ್, ಬೆಂಗಳೂರು–560 053.

**ದೂರವಾಣಿ : 22280566 / 22375507, 7411752827**

## 28ನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯ ಅಮಂತ್ರಣ

ಆತ್ಮೀಯ ಸದಸ್ಯರೇ,

ನಮ್ಮ ಸಹಕಾರಿಯ 2024–25 ನೇ ಸಾಲಿನ ಸಾಮಾನ್ಯ ಸದಸ್ಯರ ಸಭೆಯನ್ನು ದಿನಾಂಕ 14–09–2025 ನೇ ಭಾನುವಾರ ಬೆಳಿಗ್ಗೆ 10.30 ಕ್ಕೆ "ಶಾರದಾ ಸ್ತ್ರೀ ಸಮಾಜ ಟ್ರಸ್ಟ್ (ರಿ), ನಂ. 39, ಶತಮಾನೋತ್ಸವ ಭವನ", 1ನೇ ಮುಖ್ಯ ರಸ್ತೆ, ಆಲ್ಬರ್ಟ್ ವಿಕ್ಟರ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018 ರಲ್ಲಿನ ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ. ಎಂ.ಶಿವರುದ್ರಪ್ಪರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಯಲ್ಲಿ ತಿಳಿಸಿರುವ ವಿಷಯಗಳನ್ನು ಪರಿಶೀಲಿಸಿ ಅಂಗೀಕರಿಸಲು ಕರೆಯಲಾಗಿದೆ.

### ಸಭೆಯ ಕಾರ್ಯಸೂಚಿ

1. ಪ್ರಾರ್ಥನೆ

ಎ. ಸಾಮಾನ್ಯ ಸದಸ್ಯರ ಸಭೆಯನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟನೆ

2. ಸ್ವಾಗತ ಭಾಷಣ
3. 2024–25 ನೇ( 28 ನೇ) ಸಾಲಿನ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.
4. ಕಳೆದ ಸಾಮಾನ್ಯ ಸದಸ್ಯರ ಸಭೆ ಹಾಗೂ ಇಂದಿನ ಸಭೆ ನಡುವೆ ದೈವಾಧೀನರಾದ ಸದಸ್ಯರಿಗೆ ಗೌರವ ಪೂರ್ಣ ಶ್ರದ್ಧಾಂಜಲಿ ಅರ್ಪಿಸುವುದು.
5. ಸನ್ಮಾನ ಕಾರ್ಯಕ್ರಮಗಳು

(ಅ) ಸಹಕಾರಿಯ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ.

(ಆ) ಸಹಕಾರಿಯ 80 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಹಿರಿಯ ಸದಸ್ಯರಿಗೆ ಸನ್ಮಾನ.

6. ದಿನಾಂಕ 22–09–2024 ರಂದು ನಡೆದ 27 ನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯ ನಡಾವಳಿಗಳನ್ನು ದೃಡೀಕರಿಸುವುದು.
7. 2024–25 ನೇ ಸಾಲಿನ ಆಡಳಿತ ಮಂಡಳಿ ವಾರ್ಷಿಕ ವರದಿ ಮಂಡನೆ ಹಾಗೂ ಅಂಗೀಕಾರ.
8. 2024–25 ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನು ಮತ್ತು ಲೆಕ್ಕ ಪರಿಶೋಧಿತ ಲೆಕ್ಕ ಪತ್ರಗಳ ಮಂಡನೆ ಹಾಗೂ ಅಂಗೀಕಾರ.
9. 2024–25 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ಅನುಮೋದಿಸುವುದು.
10. 2024–25 ನೇ ಸಾಲಿನ ನಿವ್ವಳ ಲಾಭದ ವಿಲೇವಾರಿಯನ್ನು ಅನುಮೋದಿಸುವುದು.
11. 2025–26 ನೇ ಸಾಲಿನ ಲೆಕ್ಕ ಪತ್ರಗಳ ಪರಿಶೋಧನೆಗಾಗಿ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
12. 2024–25 ನೇ ಸಾಲಿನ ಬಜೆಟ್ ನ ಹೆಚ್ಚು/ ಕಡಿಮೆ ವಾಸ್ತವಿಕ ಖರ್ಚಿನ ಅನುಮೋದನೆ ಹಾಗೂ 2025–26 ನೇ ಸಾಲಿನ ವಾರ್ಷಿಕ ಮುಂಗಡ ಪತ್ರ(ಬಜೆಟ್) ಅನುಮೋದಿಸುವುದು.
13. ಸೂಕ್ತ ಮುನ್ಸೂಚನೆಯಂತೆ ಲಿಖಿತ ಪತ್ರದ ಮೂಲಕ ಬಂದ ಪ್ರಶ್ನೆಗಳು–ಸ್ಪಷ್ಟೀಕರಣ.
14. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.
15. ವಂದನಾರ್ಪಣೆ.

ಸಹಕಾರಿಯ 2024–25 ನೇ ಸಾಲಿನ ಆಡಳಿತ ಮಂಡಳಿ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧಕರ ವರದಿಯನ್ನು ಸಹಕಾರಿಯ ವೆಬ್‌ಸೈಟ್ www.suprajasouhardha.com ನಲ್ಲಿ ದಿನಾಂಕ 10–09–2025 ರಿಂದ ನೋಡಬಹುದು.

ಆಡಳಿತ ಮಂಡಳಿಯ ಆದೇಶದ ಮೇರೆಗೆ
ಸಹಿ/–
ಡಾ. ಹೆಚ್. ನರಸಿಂಹಮೂರ್ತಿ
ಮುಖ್ಯ ಕಾರ್ಯನಿರ್ವಾಹಕರು

ಸ್ಥಳ : ಬೆಂಗಳೂರು
ದಿನಾಂಕ : 14–08–2025

## ಕಾರ್ಯಸೂಚಿ– 04

**ಕಳೆದ ಸಾಮಾನ್ಯ ಸದಸ್ಯರ ಸಭೆ ಹಾಗೂ ಇಂದಿನ ಸಭೆ ನಡುವೆ ದೈವಾಧೀನರಾದ ಸದಸ್ಯರ ಆತ್ಮಕ್ಕೆ ಚಿರಶಾಂತಿ ಕೋರುವುದು.**

ಕಳೆದ ಸಾಮಾನ್ಯ ಸದಸ್ಯರ ಸಭೆ ಹಾಗೂ ಇಂದಿನ ಸಾಮಾನ್ಯ ಸದಸ್ಯರ ಸಭೆಯ ನಡುವೆ ನಿಧನರಾದ ಸಹಕಾರಿಯ ಸದಸ್ಯರುಗಳ ವಿವರಗಳು ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ಸದಸ್ಯತ್ವದ ಸಂಖ್ಯೆ | ಸದಸ್ಯರ ಹೆಸರು |
|---|---|---|
| 1 | 3222 | ಶ್ರೀನಿವಾಸ ಕೆ.ವೈ |
| 2 | 244 | ಅರ್ಮುಗಂ.ಡಿ |
| 3 | 3268 | ಜಯಲಕ್ಷ್ಮೀ |
| 4 | 2059 | ಲಕ್ಷ್ಮೀ ಭೂಷಣ್ ಎಸ್.ಎಸ್ |
| 5 | 3078 | ಮಿಥೀಲೇಷ್ ಎಸ್.ಎಸ್ |
| 6 | 1553 | ರಂಗಮಣಿ.ಕೆ |
| 7 | 45 | ಜನಾರ್ಧನ್ .ಕೆ |
| 8 | 3452 | ವಿ.ಮುರಳೀದರ್ |

| ಕ್ರಮ ಸಂಖ್ಯೆ | ಸದಸ್ಯತ್ವದ ಸಂಖ್ಯೆ | ಸದಸ್ಯರ ಹೆಸರು |
|---|---|---|
| 9 | 2802 | ಅನಂತಮೂರ್ತಿ.ಕೆ.ಎಸ್ |
| 10 | 134 | ರತ್ನಮ್ಮ |
| 11 | 1062 | ಟಿ.ಸಿ.ಮಂಜುನಾಥ್ |
| 12 | 1405 | ಪಿ.ಎಸ್ ಬಸವರಾಜ್ |
| 13 | 1478 | ಬಿ.ಈಶ್ವರಪ್ಪನವರು |
| 14 | 534 | ಎಂ. ವಿಶ್ವನಾಥ್ |
| 15 | 806 | ಎಂ.ಪಿ.ಸದಾಶಿವಯ್ಯ |
| | | |

ಇವರೆಲ್ಲರಿಗೂ ಶ್ರದ್ಧಾಂಜಲಿ ಅರ್ಪಿಸುವುದು ನಮ್ಮೆಲ್ಲರ ಕರ್ತವ್ಯ. ಸಹಕಾರಿಯು ತನ್ನ ನಿರ್ದೇಶಕ ಮಂಡಳಿ ಪರವಾಗಿಯೂ, ಸಿಬ್ಬಂದಿ ವರ್ಗದವರ ಪರವಾಗಿಯೂ ಹಾಗೂ ಎಲ್ಲಾ ಸದಸ್ಯರುಗಳ ಪರವಾಗಿ ಮೇಲ್ಕಂಡ ನಿಧನರಾದ ಸದಸ್ಯರುಗಳಿಗೆ ಸಂತಾಪ ವ್ಯಕ್ತಪಡಿಸುತ್ತಾ ಇವರೆಲ್ಲರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಹಾಗೂ ಅವರುಗಳ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನು ನೀಡಲೆಂದು ಒಂದು ನಿಮಿಷ ಮೌನ ಆಚರಿಸುತ್ತಾ ಪ್ರಾರ್ಥಿಸೋಣ.

## ಕಾರ್ಯಸೂಚಿ– 06

**ದಿನಾಂಕ 22.09.2024ರಂದು ನಡೆದ ಸಹಕಾರಿಯ 27ನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯ ನಡಾವಳಿಗಳನ್ನು ದೃಢೀಕರಿಸುವುದು.**

ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಸಹಕಾರಿಯ 27ನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯು ಅಧ್ಯಕ್ಷರಾದ ಶ್ರೀ.ಎಂ.ಶಿವರುದ್ರಪ್ಪರವರ ಅಧ್ಯಕ್ಷತೆಯಲ್ಲಿ ದಿನಾಂಕ 22.09.2024ರ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಷರಾಫ್.ಬಿ.ಬಸಪ್ಪ ಮತ್ತು ಶ್ರೀಮತಿ ಗಂಗಮ್ಮ ಕಲ್ಯಾಣ ಕೇಂದ್ರ, "ಎಸ್.ಬಿ.ಎನ್. ಹಾಲ್ ನಂ 76, ಬುಲ್ ಟೆಂಪಲ್ ರಸ್ತೆ, ಬೆಂಗಳೂರು–560019" ರಲ್ಲಿ ನಡೆದು ಈ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿತು.

ಸಾಮಾನ್ಯ ಸದಸ್ಯರ ಸಭೆಯು ಬೆಳಗ್ಗೆ 10.40ಕ್ಕೆ ಪ್ರಾರಂಭಗೊಂಡಿತು.

ಸಾಮಾನ್ಯ ಸದಸ್ಯರ ಸಭೆಯಲ್ಲಿ ಭಾಗವಹಿಸಿದ್ದ ಒಟ್ಟು ಸದಸ್ಯರು 434. ಹಾಗೂ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ.ಕೆ.ಎನ್.ವೆಂಕಟರಾಮ್‌ರವರು ಮತ್ತು ಸಹಕಾರಿಯ ಸದಸ್ಯರಾದ ಶ್ರೀ.ಎಸ್.ಎ. ನಾಗಭೂಷಣ್ ಹಾಗೂ ಶ್ರೀಮತಿ ಲಕ್ಷ್ಮಿ ನಾಗಭೂಷಣ್‌ರವರು ಸಭೆಗೆ ಗೈರು ಹಾಜರಾತಿ ಆಗುತ್ತಿರುವ ಬಗ್ಗೆ ಪತ್ರ ನೀಡಿ ಅನುಮತಿ ಕೋರಿರುವುದನ್ನು ಸಭೆಗೆ ಮುಖ್ಯ ಕಾರ್ಯನಿರ್ವಾಹಕರು ಮಂಡಿಸಿದರು.

ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ.ಹೆಚ್.ನರಸಿಂಹಮೂರ್ತಿರವರು ಸಹಕಾರಿಯ ಅಧ್ಯಕ್ಷರಾದ ಶ್ರೀ.ಎಂ.ಶಿವರುದ್ರಪ್ಪರವರನ್ನು ಹಾಗೂ ಸಹಕಾರಿಯ ಎಲ್ಲಾ ನಿರ್ದೇಶಕರನ್ನು ವೇದಿಕೆಗೆ ಆಹ್ವಾನಿಸಿದರು ಮತ್ತು ಸಭೆಯ ಕಾರ್ಯ ಸೂಚಿಯಲ್ಲಿರುವ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕೆಂದು ಸಹಕಾರಿಯ ಅಧ್ಯಕ್ಷರಾದ ಶ್ರೀ.ಎಂ.ಶಿವರುದ್ರಪ್ಪರವರನ್ನು ಕೋರಿದರು.

**ಕಾರ್ಯ ಸೂಚಿ 01:– ಪ್ರಾರ್ಥನೆ.**
ಸಹಕಾರಿಯ ನಿರ್ದೇಶಕಿಯಾದ ಶ್ರೀಮತಿ ಎಂ.ಎಸ್.ವೀಣಾರವರು ಪ್ರಾರ್ಥನೆ ಮಾಡಿದರು.

**ಕಾರ್ಯ ಸೂಚಿ 02:– ಸ್ವಾಗತ ಭಾಷಣ.**

ಸಹಕಾರಿಯ ಅಧ್ಯಕ್ಷರಾದ ಶ್ರೀ.ಎಂ.ಶಿವರುದ್ರಪ್ಪರವರು ಸಾಮಾನ್ಯ ಸದಸ್ಯರ ಸಭೆಗೆ ಆಗಮಿಸಿರುವ ಸಹಕಾರಿಯ ಎಲ್ಲಾ ಸದಸ್ಯರನ್ನು ಮೊದಲಿಗೆ ಹಾರ್ಧಿಕವಾಗಿ ಸ್ವಾಗತಿಸಿದರು. ನಂತರ ಪ್ರಸ್ತುತ ಆಡಳಿತ ಮಂಡಳಿಯ ಉಪಾಧ್ಯಕ್ಷರನ್ನು ಹಾಗೂ ಎಲ್ಲಾ ನಿರ್ದೇಶಕರನ್ನು ಸಭೆಗೆ ಒಬ್ಬೊಬ್ಬರನ್ನಾಗಿ ಪರಿಚಯಿಸಿ ಸ್ವಾಗತ ಕೋರಿದರು. ನಂತರ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ.ಎನ್.ಎಂ. ಶಿವಕುಮಾರ್‌ರವರನ್ನು ಹಾಗೂ ಸಭೆಗೆ ಹಾಜರಿದ್ದ ಇತರೆ ಮಾಜಿ ನಿರ್ದೇಶಕರುಗಳನ್ನು ಸಹ ಸಭೆಗೆ ಸ್ವಾಗತಿಸಿದರು.

ನಂತರ ಸಹಕಾರಿಯ ಸಿಬ್ಬಂದಿ ವರ್ಗದವರನ್ನು ಸಹಕಾರಿಯ ಕಾನೂನು ಸಲಹೆಗಾರರಾದ ಶ್ರೀ.ಎಸ್.ಪರಮೇಶ್ ಮತ್ತು ಶ್ರೀ.ಬಿ.ಎನ್.ಸ್ವಾಮಿರವರನ್ನು, ಮೌಲ್ಯಮಾಪಕರನ್ನು, ಲೆಕ್ಕ ಪರಿಶೋಧಕರನ್ನು ಹಾರ್ದಿಕವಾಗಿ ಸ್ವಾಗತಿಸಿದರು.

ಅಧ್ಯಕ್ಷರಾದ ಶ್ರೀ.ಎಂ.ಶಿವರುದ್ರಪ್ಪರವರ ಕೋರಿಕೆ ಮೇರೆಗೆ, ಸಹಕಾರಿಯ ಸದಸ್ಯರಾದ ಡಾ॥ ಡಿ.ಆರ್.ಶೇಖರ್, ಶ್ರೀ ಕಿಕ್ಕೇರಿ ಕೃಷ್ಣಮೂರ್ತಿರವರು ಹಾಗೂ ಶ್ರೀ ಟಿ. ಲೋಕೇಶಯ್ಯರವರುಗಳೊಂದಿಗೆ ಎಲ್ಲಾ ನಿರ್ದೇಶಕರು ಸೇರಿ ಜ್ಯೋತಿ ಬೆಳಗಿಸುವ ಮೂಲಕ ಸಭೆಯು ಉದ್ಘಾಟನೆಗೊಂಡಿತು.

**ಕಾರ್ಯ ಸೂಚಿ 03:– 2023–24ನೇ ಸಾಲಿನ 27ನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.**

ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ.ಹೆಚ್.ನರಸಿಂಹ ಮೂರ್ತಿರವರು 2023–24ನೇ ಸಾಲಿನ 27ನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯ ಸೂಚನಾ ಪತ್ರವನ್ನು ಸಭೆಗೆ ಓದಿ ದಾಖಲಿಸಿದರು.

**ಕಾರ್ಯ ಸೂಚಿ 04:– ಕಳೆದ ಸಾಮಾನ್ಯ ಸದಸ್ಯರ ಸಭೆ ಹಾಗೂ ಇಂದಿನ ಸಭೆ ನಡುವೆ ದೈವಾಧೀನರಾದ ಸದಸ್ಯರ ಆತ್ಮಕ್ಕೆ ಶ್ರದ್ಧಾಂಜಲಿ ಕೋರುವುದು.**

ಕಳೆದ ಸಾಮಾನ್ಯ ಸದಸ್ಯರ ಸಭೆ ಹಾಗೂ ಇಂದಿನ ಸಾಮಾನ್ಯ ಸದಸ್ಯರ ಸಭೆಯ ನಡುವೆ ನಿಧನರಾದ ಕೆ.ಪುಟ್ಟಸ್ವಾಮಿ, ಎಂ.ಜಲಜಾಕ್ಷಿ, ಆರ್.ವಿ.ಪುಷ್ಪವತಿ, ವಿ.ಶಿವರುದ್ರಯ್ಯ, ಸಿ.ಜಯರಾಮ್, ಆರಾಧ್ಯ ಚಂದ್ರ ಮೋಹನ್, ಎಂ.ಕೆ.ಪ್ರಾಣನಾಥ್, ಎನ್.ಮಲ್ಲಿಕಾ, ಎಸ್.ವೆಂಕಟೇಶನ್ ಮತ್ತು ಎಸ್.ಗಿರಿಜಾರವರುಗಳ ದೈವಾಧೀನರಾದ ಬಗ್ಗೆ ಸಹಕಾರಿಯ ನಿರ್ದೇಶಕರಾದ ಶ್ರೀ.ಎಂ.ಮಲ್ಲಿಕಾರ್ಜುನ್‌ರವರು ಸಭೆಗೆ ತಿಳಿಸಿ, ನಿಧನರಾದ ಸದಸ್ಯರುಗಳ ಅತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲೆಂದು ತಿಳಿಸಿ ಸಭೆಯು ಇವರುಗಳಿಗಾಗಿ ಒಂದು ನಿಮಿಷ ಮೌನಾಚರಣೆ ಮಾಡಲು ಕೋರಿದಾಗ ಸಭೆಯು ಎದ್ದು ನಿಂತು ಗೌರವ ಸಮರ್ಪಿಸಿತು.

**ಕಾರ್ಯ ಸೂಚಿ 05:– ದಿನಾಂಕ 10.09.2023ರಂದು ನಡೆದ 26ನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯ ನಡಾವಳಿಗಳನ್ನು ಧೃಢೀಕರಿಸುವುದು.**

ಸಹಕಾರಿಯ ನಿರ್ದೇಶಕರಾದ ಶ್ರೀ.ಎನ್.ಎನ್.ಕಾಂತರಾಜ್‌ರವರು ದಿನಾಂಕ 10.09.2023ರಂದು ನಡೆದ ಹಿಂದಿನ ಸಾಲಿನ 26ನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯ ನಡಾವಳಿಗಳನ್ನು ವರದಿ ಪುಸ್ತಕದ ಪುಟ ಸಂಖ್ಯೆ 02ರಿಂದ 05ರವರೆಗೆ ಮುದ್ರಿಸಿರುವುದನ್ನು ಸಭೆಗೆ ಓದಿ ದಾಖಲಿಸಲು ಅಂಗೀಕಾರ ನೀಡಲು ಸಭೆಯನ್ನು ಕೋರಲಾಗಿ, ಹಿಂದಿನ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯ ನಡಾವಳಿಗಳನ್ನು ದಾಖಲಿಸಲು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ಕಾರ್ಯ ಸೂಚಿ 06:– 2023–24ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಅನುಮೋದಿಸುವುದು.**

ಸಹಕಾರಿಯ ಅಧ್ಯಕ್ಷರಾದ ಶ್ರೀ.ಎಂ.ಶಿವರುದ್ರಪ್ಪರವರು 2023–24ನೇ ಸಾಲಿನ ಆಡಳಿತ ಮಂಡಳಿ ವಾರ್ಷಿಕ ವರದಿಯನ್ನು ವರದಿ ಪುಸ್ತಕದಲ್ಲಿ ಪುಟ ಸಂಖ್ಯೆ 06ರಿಂದ 10ರವರೆಗೆ ಮುದ್ರಿಸಿರುವಂತೆ ಓದಿ ಸಭೆಗೆ ವಿವರಿಸಿದರು. ನಂತರ ಆಡಳಿತ ಮಂಡಳಿಯ 2023–24ನೇ ಸಾಲಿನ ವಾರ್ಷಿಕ ವರದಿಗೆ ಸಭೆಯ ಅಂಗೀಕಾರವನ್ನು ಕೋರಲಾಗಿ, ಅದಕ್ಕೆ ಸಭೆಯು ಸರ್ವಾನುಮತದಿಂದ ಅಂಗೀಕಾರ ನೀಡಿತು.

**ಕಾರ್ಯ ಸೂಚಿ 07:– 2022–23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಹಾಗೂ ಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಪರಿಗಣಿಸಿ ಅನುಮೋದಿಸುವುದು.**

ಸಹಕಾರಿಯ ಉಪಾಧ್ಯಕ್ಷರಾದ ಶ್ರೀ.ಬಿ.ಆರ್. ಜಯದೇವ್‌ರವರು ವರದಿ ಪುಸ್ತಕದ ಪುಟ ಸಂಖ್ಯೆ 11 ರಿಂದ 18 ರವರೆಗೆ ಮುದ್ರಿಸಿರುವ 2023–24ನೇ ಸಾಲಿನ ಲೆಕ್ಕ ಪರಿಶೋಧಕರ ವರದಿ ಮತ್ತು ಪರಿಶೋಧಿತ ಲೆಕ್ಕ ಪತ್ರಗಳನ್ನು ಸಭೆಗೆ ಮಂಡಿಸಿ, ಅವುಗಳಿಗೆ ಸಭೆಯ ಅಂಗೀಕಾರ ಕೋರಿದರು. ಸಭೆಯು ಲೆಕ್ಕ ಪರಿಶೋಧಕರ ವರದಿ ಮತ್ತು ಪರಿಶೋಧಿತ ಲೆಕ್ಕಪತ್ರಗಳಿಗೆ ಸಭೆಯು ಒಕ್ಕೊರಲಿನಿಂದ ಅನುಮೋದನೆ ನೀಡಿತು.

**ಕಾರ್ಯ ಸೂಚಿ 08:– 2023–24ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಅನುಮೋದಿಸುವುದು.**

ಸಹಕಾರಿಯ ಉಪಾಧ್ಯಕ್ಷರಾದ ಶ್ರೀ.ಬಿ.ಆರ್.ಜಯದೇವ್‌ರವರು ವರದಿ ಪುಸ್ತಕದ ಪುಟ 19ರಲ್ಲಿ 2023–24 ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯಲ್ಲಿ ಲೆಕ್ಕಪರಿಶೋಧಕರು ವರದಿ ಮಾಡಿರುವ ಒಂದು ಸಾಲ ಮರುಪಾವತಿಯಲ್ಲಿ ಸಹಕಾರಿಯು ನೀಡಿರುವ ರಿಯಾಯಿತಿಯನ್ನು ಹಾಗೂ ಇತರೆ ವಿಷಯಗಳಿಗೆ ಅನುಪಾಲನಾ ವರದಿಯನ್ನು ಸಭೆಗೆ ವಿವರಿಸಿದರು. ಇದಕ್ಕೆ ಅಂಗೀಕಾರವನ್ನು ನೀಡಬೇಕಾಗಿ ಸಭೆಯನ್ನು ಕೋರಲಾಗಿ ಅದನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ಕಾರ್ಯ ಸೂಚಿ 09:– 2023–24ನೇ ಸಾಲಿನ ನಿವ್ವಳ ಲಾಭದ ವಿಲೇವಾರಿಯನ್ನು ಅನುಮೋದಿಸುವುದು.**

ಸಹಕಾರಿಯ ಅಧ್ಯಕ್ಷರಾದ ಶ್ರೀ.ಎಂ.ಶಿವರುದ್ರಪ್ಪರವರು ಮಾತನಾಡುತ್ತಾ 2023–24ನೇಸಾಲಿನ ನಿವ್ವಳ ಲಾಭದ ವಿಲೇವಾರಿಯ ಕುರಿತು ವರದಿ ಪುಸ್ತಕದ ಪುಟ 20ರಲ್ಲಿ ಮುದ್ರಿಸಿರುವಂತೆ ಸಹಕಾರಿಗೆ 2023–24 ಸಾಲಿನಲ್ಲಿ ರೂ 1,63,05,694/–ಗಳ ನಿವ್ವಳ ಲಾಭವನ್ನು ಗಳಿಸಿದ್ದು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಹಕಾರಿಯ ಉಪನಿಬಂಧನೆಗಳ ಪ್ರಕಾರ ನಿವ್ವಳಲಾಭವನ್ನು ವಿವಿಧ ಬಾಬ್ತುಗಳಿಗೆ ವಿಲೇವಾರಿ ಮಾಡಲು ಹಾಗೂ ಸದಸ್ಯರಿಗೆ ಶೇ 25ರಂತೆ ಲಾಭಾಂಶವನ್ನು ವಿತರಿಸಲು ಆಡಳಿತ ಮಂಡಳಿಯ ಶಿಫಾರಸ್ಸು ಮಾಡಿರುವುದನ್ನು ಸಭೆಗೆ ತಿಳಿಸಿದಾಗ ಮಹಾಸಭೆಯು ನಿವ್ವಳ ಲಾಭದ ವಿಲೇವಾರಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ಕಾರ್ಯ ಸೂಚಿ 10:– 2024–25ನೇ ಸಾಲಿನ ಲೆಕ್ಕ ಪತ್ರಗಳ ಪರಿಶೋಧನೆಗಾಗಿ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗಧಿಪಡಿಸುವುದು.**

ಸಹಕಾರಿಯ ನಿರ್ದೇಶಕರಾದ ಶ್ರೀ.ಎಂ.ಮಹೇಶ್‌ರವರು 2024–25ನೇ ಸಾಲಿನ ಲೆಕ್ಕೆ ಪರಿಶೋಧನೆಗಾಗಿ 03 ಲೆಕ್ಕ ಪರಿಶೋಧಕರ ಪ್ರಸ್ತಾವನೆ ಇದ್ದು ಇದರಲ್ಲಿ ಹೆಚ್.ಶಿವಕುಮಾರ್‌ರವರನ್ನು ನೇಮಕ ಮಾಡಿಕೊಳ್ಳಬಹುದು. ಇವರಿಗೆ ಕಳೆದ ಸಾಲಿನ ಲೆಕ್ಕಪರಿಶೋಧಕರಿಗೆ ನೀಡಿದ್ದ ಸಂಭಾವನೆ ರೂ 70,000/–ಗಳನ್ನು ನೀಡಬಹುದೆಂದು ಸಭೆಗೆ ತಿಳಿಸಿ ಅನುಮೋದನೆ ಕೋರಿದರು. ಸಭೆಯು ಇದಕ್ಕೆ ಸರ್ವಾನುಮತದ ಅನುಮೋದನೆ ನೀಡಿತು.

**ಕಾರ್ಯ ಸೂಚಿ 11:– 2023–24ನೇ ಸಾಲಿನ ಬಜೆಟ್‌ನ ಹೆಚ್ಚು/ಕಡಿಮೆ ವಾಸ್ತವಿಕ ಖರ್ಚಿನ ಅನುಮೋದನೆ ಹಾಗೂ 2024–25ನೇ ಸಾಲಿನ ವಾರ್ಷಿಕ ಮುಂಗಡ ಪತ್ರ (ಬಜೆಟ್) ಅನುಮೋದಿಸುವುದು.**

2023–24ನೇ ಸಾಲಿನ ಬಜೆಟ್ ಹೆಚ್ಚು/ಕಡಿಮೆ ವಾಸ್ತವಿಕ ಖರ್ಚಿನ ಅನುಮೋದನೆ ಹಾಗೂ 2024–25ನೇ ಸಾಲಿನ ವಾರ್ಷಿಕ ಮುಂಗಡ ಪತ್ರದ ಬಗ್ಗೆ ನಿರ್ದೇಶಕರಾದ ಶ್ರೀ.ಎಂ.ರಾಜೇಂದ್ರನ್‌ರವರು ಪೂರ್ಣ ವಿವರಗಳನ್ನು ಸಭೆಗೆ ಮಂಡಿಸಿ ಅದಕ್ಕೆ ಸಭೆಯ ಅಂಗೀಕಾರ ನೀಡಬೇಕೆಂದು ಕೋರಲಾಗಿ, ಸಾಮಾನ್ಯ ಸಭೆಯು 2023–24ನೇ ಸಾಲಿನ ಬಜೆಟ್‌ನ ಹೆಚ್ಚು/ಕಡಿಮೆ ವಾಸ್ತವಿಕ ಖರ್ಚಿನ ಹೆಚ್ಚು/ಕಡಿಮೆಯನ್ನು ಅನುಮೋದಿಸಿ, 2024–25ನೇ ಸಾಲಿನ ಪ್ರಸ್ತಾವಿಕ ಅಂದಾಜು ಆಯ–ವ್ಯಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು.

**ಕಾರ್ಯ ಸೂಚಿ: 12 ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ಉಪವಿಧಿಯ ತಿದ್ದುಪಡಿ ಕುರಿತು.**

ಸಹಕಾರಿಯ ನಿರ್ದೇಶಕರಾದ ಶ್ರೀ.ಬಿ.ವಿ.ಪ್ರಸನ್ನ ಕುಮಾರ್‌ರವರು ಉಪವಿಧಿಗಳ ಸೂಚಿತ ತಿದ್ದುಪಡಿಗಳನ್ನು ವರದಿ ಪುಸ್ತಕದ ಪುಟ ಸಂಖ್ಯೆ 22ರಿಂದ 24ರವರೆಗೆ ಮುದ್ರಿಸಲಾಗಿದ್ದು, ಉಪ ವಿಧಿಗಳ ಸಂಖ್ಯೆ 19(ಸಿ), 33(ಎ), 33(ಬಿ), 39, 39(8), 54(5)2 ಗಳಿಗೆ ಮಂಡಿಸಿರುವ ಉದ್ದೇಶಿತ ತಿದ್ದುಪಡಿ ಮತ್ತು ಹೊಸ ಸೇರ್ಪಡೆಗಳಿಗೆ ಅಂಗೀಕಾರ ನೀಡಲು ಸಭೆಯನ್ನು ಕೋರಲಾಗಿ, ಸಭೆಯು ಉಪನಿಧಿಗಳ ತಿದ್ದುಪಡಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ಕಾರ್ಯ ಸೂಚಿ 13:– ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ಕೆಲವೊಂದು ಸಾಲ ನಿಯಮಾವಳಿಯಲ್ಲಿ ಮಾರ್ಪಾಡು ಮಾಡುವ ಬಗ್ಗೆ.**

ಸಹಕಾರಿಯ ನಿರ್ದೇಶಕರಾದ ಶ್ರೀ.ಟಿ.ವಿ.ಟಿ ಪ್ರಕಾಶ್‌ರವರು ಸಾಲ ನಿಯಮಾವಳಿಯಲ್ಲಿ ಮಾರ್ಪಾಡಿನ ಬಗ್ಗೆ ಹಾಗೂ ಹೊಸ ಸಾಲ ಯೋಜನೆ ಬಗ್ಗೆ ವರದಿ ಪುಸ್ತಕ ಪುಟ ಸಂಖ್ಯೆ 25ರಲ್ಲಿ ಮುದ್ರಿಸಿರುವುದನ್ನು ವಿವರವಾಗಿ ಸಭೆಗೆ ಮಂಡಿಸಿ ಅನುಮೋದನೆ ಕೋರಿದರು. ಸಭೆಯು ಸರ್ವಾನುಮತದಿಂದ ಸಾಲ ನಿಯಮಾವಳಿಯನ್ನು ಮಾರ್ಪಾಡು ಮಾಡಿರುವುದಕ್ಕೆ ಹಾಗೂ ಹೊಸ ಚಿನ್ನದ ನಾಣ್ಯ ಖರೀದಿ ಸಾಲ ಯೋಜನೆಗೆ ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯ ಸೂಚಿ 14:– ಸೂಕ್ತ ಮೂನ್ಸೂಚನೆಯಂತೆ ಲಿಖಿತ ಪತ್ರದ ಮೂಲಕ ಬಂದ ಪ್ರಶ್ನೆಗಳು ಸ್ಪಷ್ಟೀಕರಣ.**

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಸಾಮಾನ್ಯ ಸದಸ್ಯರ ಸಭೆಗೆ ಏಳು ದಿವಸಗಳ ಮುಂಚಿತವಾಗಿ ಯಾವ ಪತ್ರಗಳು ಬಂದಿರುವುದಿಲ್ಲವೆಂದು ಸಭೆಗೆ ಮುಖ್ಯ ಕಾರ್ಯನಿರ್ವಾಹಕರು ತಿಳಿಸಿದರು.

**ಕಾರ್ಯ ಸೂಚಿ 15:– ಸಹಕಾರಿಯ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ 80 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಹಿರಿಯ ಸಹಕಾರಿಯ ಸದಸ್ಯರಿಗೆ ಸನ್ಮಾನ.**

ಸಹಕಾರಿಯ ನಿರ್ದೇಶಕಿಯಾದ ಶ್ರೀಮತಿ ಮುಕ್ತಾ ಶಿವರುದ್ರಪ್ಪರವರು ಸದಸ್ಯರ ಪ್ರತಿಭಾನ್ವಿತ ಮಕ್ಕಳ ಸನ್ಮಾನ ಕಾರ್ಯಕ್ರಮವನ್ನು ನಡೆಸುತ್ತಾ ಎಸ್.ಎಸ್.ಎಲ್.ಸಿ/ಐ.ಸಿ.ಎಸ್.ಸಿ/ಸಿ.ಬಿ.ಎಸ್.ಸಿ ಪರೀಕ್ಷೆಯಲ್ಲಿ ಶೇಕಡಾ 90 ಮತ್ತು ಅಧಿಕ ಅಂಕ ಪಡೆದಿರುವ 6 ವಿದ್ಯಾರ್ಥಿಗಳನ್ನು, ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ 85% ಮತ್ತು ಅಧಿಕ ಅಂಕ ಪಡೆದಿರುವ 12 ವಿದ್ಯಾರ್ಥಿಗಳನ್ನು, ಪದವಿ ಪರೀಕ್ಷೆಯಲ್ಲಿ (ಬಿ.ಇ, ಬಿ.ಟೆಕ್, ಬಿ.ಬಿ.ಎ) 75% ಮತ್ತು ಅಧಿಕ ಅಂಕ ಪಡೆದಿದ್ದ 6 ವಿದ್ಯಾರ್ಥಿಗಳನ್ನು ಸಹಕಾರಿಯ ನಿರ್ದೇಶಕರುಗಳಿಂದ ಸನ್ಮಾಸಲಾಯಿತು. ಒಟ್ಟು 24 ಸದಸ್ಯರ ಮಕ್ಕಳಿಗೆ ಸನ್ಮಾನ ಮಾಡುತ್ತಾ ಇವರುಗಳಿಗೆ ಸಹಕಾರಿಯಿಂದ ನೀಡಿರುವ ಒಂದು ಸರ್ಟಿಫೀಕೇಟ್, ರೂ 3000/– ನಗದು ಬಹುಮಾನ ಹಾಗೂ ಅಧ್ಯಕ್ಷರಾದ ಶ್ರೀ.ಎಂ.ಶಿವರುದ್ರಪ್ಪರವರು ವೈಯುಕ್ತಿಕವಾಗಿ ನೀಡಿರುವ ಸಪ್ನ ಬುಕ್ ಹಾಸ್‌ನ ಗಿಫ್ಟ್ ಕಾರ್ಡ್‌ನ್ನು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನೀಡಿ ಅವರುಗಳ ಮುಂದಿನ ವಿದ್ಯಾಭ್ಯಾಸ ಉತ್ತಮವಾಗಿ ನಡೆಯಲಿ ಎಂದು ಸಹಕಾರಿಯ ನಿರ್ದೇಶಕ ಮಂಡಳಿ ಪರವಾಗಿ ಹಾರೈಸಿದರು.

ನಂತರ ಸಹಕಾರಿಯಲ್ಲಿ ಸದಸ್ಯತ್ವ ಹೊಂದಿ 80 ವರ್ಷ ಮತ್ತು ಮೀರಿದ ವಯಸ್ಸಿನ ಹಿರಿಯ ಸದಸ್ಯರುಗಳಾದ ಶ್ರೀಮತಿ ಭ್ರಮರಾಂಭ.ಪಿ.ಎಂ., ಶ್ರೀಮತಿ.ಲಲಿತಾಂಭ.ಟಿ, ಶ್ರೀಮತಿ.ಎಸ್.ಸರೋಜಮ್ಮ,ಶ್ರೀಮತಿ.ಪುಟ್ಟಮ್ಮ, ಶ್ರೀ.ಸಿ.ರಾಮಕೃಷ್ಣ, ಶ್ರೀ.ಎಂ.ವಿ.ರುದ್ರಪ್ಪ, ಶ್ರೀ.ಚಂದ್ರಶೇಖರಯ್ಯ, ಶ್ರೀ.ಕೆ.ಆರ್.ಶಿವಕುಮಾರ್, ಶ್ರೀ.ಎಂ.ಸಿ.ಶರಣಪ್ಪ, ಶ್ರೀ.ಎಸ್.ಪಟ್ಟಾಭಿರಾಮಚಾರ್, ಶ್ರೀ.ಡಿ.ಎನ್.ನಂಜಪ್ಪ, ಶ್ರೀ.ಎಂ.ಮಲ್ಲಿಕಾರ್ಜುನ್ ಸ್ವಾಮಿ, ಶ್ರೀಮತಿ ಸರೋಜಮ್ಮ ಎಸ್, ಶ್ರೀ.ಹೆಚ್.ಬಿ.ನಾಗರಾಜ್‌ಗಳನ್ನು ಸಹಕಾರಿಯ ನಿರ್ದೇಶಕಿಯಾದ ಶ್ರೀಮತಿ ಎಂ.ಎಸ್. ವೀಣಾರವರು ಪರಿಚಯಿಸಿ ಇವರುಗಳನ್ನು ಸನ್ಮಾನಿಸಲಾಯಿತು.

**ಕಾರ್ಯ ಸೂಚಿ 16:– ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು.**

ಸಭೆಗೆ ಮಂಡಿಸಲಾದ ವಿಷಯಗಳನ್ನು ಹೊರತುಪಡಿಸಿ ಸಭೆಯಲ್ಲಿ ಚರ್ಚಿಸತಕ್ಕ ಹೆಚ್ಚುವರಿ ವಿಷಯಗಳು ಯಾವುದೂ ಇರುವುದಿಲ್ಲ ಎಂದು ಸಭೆಗೆ ತಿಳಿಸಲಾಯಿತು.

**ಕಾರ್ಯ ಸೂಚಿ 17:– ವಂದನಾರ್ಪಣೆ.**

ಸಹಕಾರಿಯ ನಿರ್ದೇಶಕರಾದ ಶ್ರೀ.ಎಂ.ಮಲ್ಲಿಕಾರ್ಜುನ್‌ರವರು ಮಾತನಾಡುತ್ತಾ ಈ ಕಾರ್ಯಕ್ರಮದ ಅಂತಿಮ ಘಟ್ಟ ವಂದನಾರ್ಪಣೆ. ಇಂದಿನ ಇಪ್ಪತ್ತೇಳನೇ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಮಾನ್ಯ ಸದಸ್ಯರುಗಳು, ಅಧ್ಯಕ್ಷರು ಮತ್ತು ನಿರ್ದೇಶಕ ಮಂಡಳಿ, ಸಿಬ್ಬಂದಿವರ್ಗ, ಕಾನೂನು ಸಲಹೆಗಾರರಿಗೂ, ಮೌಲ್ಯಮಾಪಕರಿಗೂ, ಲೆಕ್ಕ ಪರಿಶೋಧಕರಿಗೂ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದವರಿಗೂ, ಸಹಕಾರ ಇಲಾಖೆಯವರಿಗೂ, ಸ್ಥಳಾವಕಾಶ ಮಾಡಿ ಕೊಟ್ಟ ಎಸ್.ಬಿ.ಎನ್ ಹಾಲ್‌ನ ಮಾಲೀಕರಿಗೂ ಮತ್ತು ಸಿಬ್ಬಂದಿವರ್ಗದವರಿಗೂ, ಹಾಗೂ ಪ್ರತ್ಯೇಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸುತ್ತಿರುವ ಎಲ್ಲಾರಿಗೂ ಸಹಕಾರಿಯ ಪರವಾಗಿ ವಂದನೆಯನ್ನು ಸಲ್ಲಿಸುತ್ತೇವೆಂದು ತಿಳಿಸಿದರು. ನಂತರ ಸಭೆಯು ಮುಕ್ತಾಯವಾಯಿತು.

## ಕಾರ್ಯಸೂಚಿ 07

# 2024–2025 ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿ ಮಂಡನೆ ಹಾಗೂ ಅಂಗೀಕಾರ

ಆತ್ಮೀಯ ಸದಸ್ಯರೇ,

ನಿಮ್ಮೆಲ್ಲರ ಈ ಸುಪ್ರಜ ಸಹಕಾರಿ ಸಂಸ್ಥೆಯ 28ನೇ ವಾರ್ಷಿಕ ಸಾಮಾನ್ಯ ಸದಸ್ಯರ ಮಹಾಸಭೆಗೆ ನನ್ನ ಪರವಾಗಿಯೂ, ನಮ್ಮ ಸಹಕಾರಿಯ ನಿರ್ದೇಶಕ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರ ಪರವಾಗಿಯೂ ತಮ್ಮೆಲ್ಲರನ್ನು ಹಾರ್ಧಿಕವಾಗಿ ಸ್ವಾಗತಿಸಲು ಹರ್ಷಿಸುತ್ತೇನೆ.

ಸುಪ್ರಜ ಸಹಕಾರಿಯ 2024–25 ನೇ ಸಾಲಿನ ವ್ಯಾಪಾರ ವಹಿವಾಟುಗಳ ಸಂಕ್ಷಿಪ್ತ ಪಕ್ಷಿ ನೋಟ, ಆಡಳಿತ ಮಂಡಳಿಯ ವಾರ್ಷಿಕ ವರದಿ ಹಾಗೂ 2024–2025 ನೇ ಸಾಲಿನ ಲೆಕ್ಕಪರಿಶೋಧನೆಗೊಂಡ ಲೆಕ್ಕಪತ್ರಗಳ ವರದಿಗಳನ್ನು ತಮ್ಮೆಲ್ಲರ ಅವಗಾಹನೆಗಾಗಿ ಈ ಮಹಾಸಭೆಯ ಮುಂದೆ ಸಲ್ಲಿಸುತ್ತಿದ್ದೇನೆ. ಸಹಕಾರಿಯು ಈ ವರ್ಷ ನಿವ್ವಳ ಲಾಭವಾಗಿ ರೂ. 292.86 ಲಕ್ಷಗಳಷ್ಟು ಗಳಿಸಿದ್ದು ಇದು ಹಿಂದಿನ ಸಾಲಿನಲ್ಲಿ ಗಳಿಸಿದ್ದ ರೂ. 163.06 ಲಕ್ಷಗಳಿಗೆ ಹೋಲಿಸಿದಾಗ ಈ ವರ್ಷದ ನಿವ್ವಳ ಲಾಭವು ರೂ. 129.80 ಲಕ್ಷಗಳಷ್ಟು ಹೆಚ್ಚಾಗಿರುವುದು ಸಂತಸದ ಸುದ್ದಿ. ಈ ಪ್ರಗತಿ/ ಹೆಚ್ಚುವರಿಗೆ ಮುಖ್ಯ ಕಾರಣವೇನೆಂದರೆ ವರದಿ ಸಾಲಿನಲ್ಲಿ ಎರಡು ದೀರ್ಘಾವಧಿ ಸುಸ್ತಿ ಸಾಲಗಳ ವಸೂಲಾತಿ ಬಗ್ಗೆ ಸಹಕಾರಿಯ ಸಿಬ್ಬಂದಿ ಹಾಗೂ ನಿರ್ದೇಶಕ ಮಂಡಳಿಯು ತೀವ್ರ ನಿಗಾವಹಿಸಿ ಈ ಎರಡು ಸಾಲಗಳು ಮುಕ್ತಾಯಗೊಂಡ ಹಿನ್ನಲೆ ಅವುಗಳಿಂದ ದೊರೆತ ಬಡ್ಡಿ ಹಣದಿಂದಾಗಿ ನಿವ್ವಳ ಲಾಭದಲ್ಲಿ ಉತ್ತಮ ಪ್ರಗತಿ ಕಂಡಿರುತ್ತದೆ. ಈ ಬಗ್ಗೆ ಪೂರ್ಣ ವಿವರಗಳನ್ನು ಮುಂದಿನ ವ್ಯಾಪಾರ ವಹಿವಾಟುಗಳ ಪರಾಮರ್ಶೆಯಲ್ಲಿ ತಿಳಿಸುತ್ತೇನೆ.

**2024–25 ನೇ ಸಾಲಿನ ವ್ಯಾಪಾರ ವಹಿವಾಟುಗಳ ಪರಾಮರ್ಶೆ**

**1. ಸದಸ್ಯತ್ವ ಮತ್ತು ಷೇರು ಬಂಡವಾಳ**

ಸಾಲಿನ ಪ್ರಾರಂಭದಲ್ಲಿ 2311 ಸದಸ್ಯರಿಂದ ದೊರೆತಿದ್ದ ರೂ. 146.27 ಲಕ್ಷ ಷೇರು ಬಂಡವಾಳವು ವರದಿ ಸಾಲಿನಲ್ಲಿ ಹೊಸದಾಗಿ ಸೇರ್ಪಡೆಯಾದ 30 ಸದಸ್ಯರುಗಳಿಂದ ದೊರೆತ ಷೇರು ಹಣ ರೂ. 0.75 ಲಕ್ಷಗಳು ಹಾಗೂ 45 ಹಳೆಯ ಸದಸ್ಯರುಗಳಿಂದ ದೊರೆತ ರೂ. 3.43 ಲಕ್ಷಗಳ ಹೆಚ್ಚುವರಿ ಷೇರು ಬಂಡವಾಳ ಹಾಗೂ 48 ಸದಸ್ಯರುಗಳ ನಿರ್ಗಮನದಿಂದಾಗಿ ವಾಪಸ್ಸು ಮಾಡಿದ ರೂ. 4.32 ಲಕ್ಷ ಷೇರು ಬಂಡವಾಳದ ನಂತರ ವರ್ಷಾಂತ್ಯಕ್ಕೆ 2293 ಸದಸ್ಯರು ಉಳಿದು ಇವರುಗಳಿಂದ ದೊರೆತಿರುವ ಷೇರು ಬಂಡವಾಳವು ರೂ. 146.13 ಲಕ್ಷಗಳಿಗೆ ತಲುಪಿದೆ. ಸಹಕಾರಿ ಸದಸ್ಯತ್ವ ಪಡೆದು ಮೂರು ವರ್ಷ ಆಗಿರುವ ಎಲ್ಲಾ ಸದಸ್ಯರುಗಳು ಅವರು ಹೊಂದಿರುವ ಷೇರು ಬಂಡವಾಳವನ್ನು ಹತ್ತು ಸಾವಿರಕ್ಕೆ ಹೆಚ್ಚಿಸಿಕೊಳ್ಳಲು ಇನ್ನೂ ಅವಕಾಶವಿರುತ್ತದೆ. ಸಹಕಾರಿಯ ನಿರ್ದೇಶಕ ಮಂಡಳಿಯ ತೀರ್ಮಾನದಂತೆ ಸಹಕಾರಿಯ ಷೇರು ಬಂಡವಾಳವು ರೂ. 150 ಲಕ್ಷ ತಲುಪುವ ವರೆಗೆ ಸದಸ್ಯರು ಹೆಚ್ಚಿನ ಷೇರುಗಳನ್ನು ಪಡೆಯಲು ಅವಕಾಶ ಇರುತ್ತದೆ.

**2. ಠೇವಣಿಗಳು**

2024–25 ನೇ ಸಾಲಿನ ಸಹಕಾರಿ ವರ್ಷದ ಪ್ರಾರಂಭದಲ್ಲಿ ಠೇವಣಿಗಳ ಒಟ್ಟು ಮೊತ್ತ ರೂ. 2658.78 ಲಕ್ಷಗಳಿದ್ದು ವರ್ಷಾಂತ್ಯಕ್ಕೆ ರೂ. 2639.99 ಲಕ್ಷಗಳಾಯಿತು. ವರದಿ ಸಾಲಿನಲ್ಲಿ ಆದ ವಹಿವಾಟುಗಳ ವಿವರ ಕೆಳಕಂಡಂತಿದೆ. ( ರೂ. ಲಕ್ಷಗಳಲ್ಲಿ )

| ಠೇವಣಿ ನಿಧಿ | 31.3.2024 ರಲ್ಲಿದ್ದಂತೆ | 1.4.2024– 31.3.2025 | | 31.3.2025 ರಲ್ಲಿದ್ದಂತೆ |
|---|---|---|---|---|
| | | ಜಮಾ | ಖರ್ಚು | |
| ಉಳಿತಾಯ ಠೇವಣಿಗಳು | 467.00 | 2445.70 | 2388.08 | 524.62 |
| ದೀರ್ಘಾವಧಿ ಠೇವಣಿಗಳು | 2191.78 | 1888.70 | 1965.11 | 2115.37 |
| ಒಟ್ಟು | 2658.78 | 4334.40 | 4353.19 | 2639.99 |

ಮೇಲ್ಕಂಡ ತಃಖ್ತೆಯಲ್ಲಿ ತಾವು ಗಮನಿಸಿದಂತೆ ದೀರ್ಘಾವಧಿ ಠೇವಣಿಗಳಲ್ಲಿ ರೂ. 76.41 ಲಕ್ಷ ಇಳಿಕೆಯಾಗಿದೆ. ಉಳಿತಾಯ ಠೇವಣಿಯಲ್ಲಿ ರೂ.57.62 ಲಕ್ಷ ಪ್ರಗತಿಯಿದ್ದು, ಉಳಿತಾಯ ಠೇವಣಿಗಳಲ್ಲಿನ ಒಟ್ಟು ಮೊತ್ತ ರೂ.524.62 ಲಕ್ಷಗಳು, ಒಟ್ಟು ಠೇವಣಿಯ ಶೇ. 19.87% ಆಗುತ್ತದೆ ಹಾಗೂ ಉಳಿತಾಯ ಠೇವಣಿಗಳಿಗೆ ನೀಡುವ ಬಡ್ಡಿದರವು ಕಡಿಮೆ ಇರುವುದರಿಂದ ಇದು ಸಹಕಾರಿಯ ಲಾಭಕ್ಕೆ ಪ್ರಯೋಜನಕಾರಿಯಾಗಿರುತ್ತದೆ.

**ಸಹಕಾರಿಯ ಠೇವಣಿ ಸಂಗ್ರಹಣೆಯಲ್ಲಿ ಇಳಿಕೆ ಕಂಡಿರುವುದಕ್ಕೆ ಮುಖ್ಯ ಕಾರಣಗಳು**

1. ಉತ್ತಮ ಹಾಗೂ ಅರ್ಹ ಸದಸ್ಯರುಗಳಿಂದ ಸಾಲ ಬೇಡಿಕೆ ಕಡಿಮೆಯಾಗಿರುವುದು.
2. ನಮ್ಮ ಸಹಕಾರಿಯು ಠೇವಣಿಗಳಿಗೆ ನೀಡುತ್ತಿರುವ ಬಡ್ಡಿ ದರವು ಕಡಿಮೆಯಿಂದಾಗಿ ಕೆಲವು ಸದಸ್ಯರು ಠೇವಣಿ ನವೀಕರಿಸದೆ ವಾಪಸ್ಸು ಪಡೆದಿರುತ್ತಾರೆ. ಇದಲ್ಲದೆ ಸಹಕಾರಿಯು ತಾರೀಖು 16–09–2020 ರಿಂದ 21–07–2023 ರವರೆಗೆ ಹೊಸ

ಠೇವಣಿಗಳನ್ನು ಸ್ವೀಕರಿಸುತ್ತಿರಲಿಲ್ಲ. ದಿನಾಂಕ 22-07-2023 ರಿಂದ ಹೊಸ ಠೇವಣಿಗಳನ್ನು ಸ್ವೀಕರಿಸುತ್ತಿದ್ದೇವೆ ಹಾಗೂ ಸಾಲ ವಿತರಣೆಯಲ್ಲಿ ಪ್ರಗತಿ ಕಂಡ ತಕ್ಷಣ ಈಗ ಠೇವಣಿಗಳಿಗೆ ನೀಡುತ್ತಿರುವ ಬಡ್ಡಿ ದರವನ್ನು ಹೆಚ್ಚು ಮಾಡುವ ಉದ್ದೇಶವಿದೆ.

## 3. ಸಾಲ ಮತ್ತು ಮುಂಗಡಗಳು

ಲಕ್ಷ ರೂ.ಗಳಲ್ಲಿ

| ಸಾಲಗಳ ವಿಧ | 31.3.2024 ರಲ್ಲಿದ್ದಂತೆ | 1.4.2024– 31.3.2025 | | 31.3.2025 ರಲ್ಲಿದ್ದಂತೆ |
|---|---|---|---|---|
| | | ಜಮಾ | ಖರ್ಚು | |
| ವೈಯುಕ್ತಿಕ ಸಾಲಗಳು | 3.77 | 3.13 | 2.35 | 2.99 |
| ಸ್ಥಿರಾಸ್ತಿ ಆಧಾರಿತ ಸಾಲಗಳು | 2254.99 | 677.65 | 555.82 | 2133.16 |
| **ಒಟ್ಟು** | **2258.76** | **680.78** | **558.17** | **2136.15** |

2024-25 ನೇ ಸಾಲಿನ ಪ್ರಾರಂಭದಲ್ಲಿ ಸಹಕಾರಿಯಲ್ಲಿನ ಸಾಲ ಮತ್ತು ಮುಂಗಡಗಳು ರೂ.2258.76 ಲಕ್ಷಗಳಿದ್ದು, ವರದಿ ಸಾಲಿನಲ್ಲಿ ರೂ.680.78 ಲಕ್ಷಗಳಷ್ಟು ಸಾಲ ವಸೂಲಾತಿ (30.14%) ಮತ್ತು ರೂ.558.17 ಲಕ್ಷಗಳಷ್ಟು ಹೊಸ ಸಾಲ ಬಿಡುಗಡೆ (24.71%) ಯಿಂದಾಗಿ 2024-25ನೇ ಸಾಲಿನ ಕೊನೆಗೆ ಸಾಲ ಶಿಲ್ಕು ರೂ.2136.15 ಲಕ್ಷಗಳು ತಲುಪಿತು. ಇದು ವರ್ಷದ ಪ್ರಾರಂಭದಲ್ಲಿದ್ದ ಶಿಲ್ಕಿಗಿಂತ ರೂ.122.61 ಲಕ್ಷಗಳಷ್ಟು ಕಡಿಮೆಯಾಗಿರುತ್ತದೆ. ಇದಕ್ಕೆ ಮುಖ್ಯ ಕಾರಣ ವರದಿ ಸಾಲಿನಲ್ಲಿ ಎರಡು ದೀರ್ಘಾವದಿ ಸುಸ್ತಿ ಸಾಲ ವಸೂಲಾತಿಯಿಂದ ದೊರೆತ ರೂ.120.89 ಲಕ್ಷಗಳು. 2025-26ನೇ ಸಾಲಿನ ಕೊನೆಗೆ ಸಹಕಾರಿಯ ಸಾಲದ ಶಿಲ್ಕು 2400.00 ಲಕ್ಷಗಳಷ್ಟು ತಲುಪುವ ಗುರಿ ಇದೆ. ಇದಲ್ಲದೆ ಕರ್ನಾಟಕ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಇತ್ತೀಚಿನ ಮಾರ್ಗಸೂಚಿಯಂತೆ ಸಹಕಾರಿಯು ಸಾಲ ಶಿಲ್ಕು ಒಟ್ಟು ಠೇವಣಿಯ ಹಣದ 80% ಮೀರುವಂತಿಲ್ಲ. ಇವುಗಳೆಲ್ಲವನ್ನು ಗಮನದಲ್ಲಿಟ್ಟುಕೊಂಡು ಸಹಕಾರಿಯ ನಿರ್ದೇಶಕ ಮಂಡಳಿಯು ಸರ್ಕಾರ ನಿಗದಿ ಪಡಿಸಿರುವ ಮಿತಿಗಳ ಅನುಸರಣೆ ಮಾಡುವತ್ತ ಸಫಲರಾಗಿದ್ದೇವೆ.

### 4. ಸುಸ್ತಿ ಸಾಲ ಖಾತೆಗಳ ವಿವರಗಳು

ಸಹಕಾರಿಯ ಒಟ್ಟು ಸಾಲ ಮತ್ತು ಮುಂಗಡಗಳು ರೂ. 2136.15 ಲಕ್ಷಗಳಿದ್ದು, ಇದರ ಪೈಕಿ ರೂ.358 ಲಕ್ಷದಷ್ಟು ಸಾಲಗಳು ಸುಸ್ತಿಯಾಗಿರುತ್ತದೆ. ಇದು ಸಹಕಾರಿ ಒಟ್ಟು ಸಾಲ ಪ್ರಮಾಣದ ಶೇಕಡಾ 16.72% ರಷ್ಟಿರುತ್ತದೆ. ಒಟ್ಟು ಸುಸ್ತಿ ಸಾಲದಲ್ಲಿ ಕೇವಲ ರೂ.1.06 ಲಕ್ಷಗಳು ಮಾತ್ರ ವೈಯುಕ್ತಿಕ ಜಾಮೀನು ಸಾಲವಾಗಿದ್ದು ಇನ್ನುಳಿದ ಎಲ್ಲಾ ಸುಸ್ತಿ ಸಾಲಗಳಿಗೂ ಸೂಕ್ತ ಸ್ಥಿರಾಸ್ತಿಯ ಭದ್ರತೆಯು ಸಹಕಾರಿಯ ಹೆಸರಿನಲ್ಲಿ ಉಪ ನೋಂದಾಣಾಧಿಕಾರಿ ಕಛೇರಿಯಲ್ಲಿ ನೋಂದಾಯಿತವಾಗಿರುತ್ತದೆ. ಕಟ್ಟಡ ಸಾಲದಲ್ಲಿ 04 ಸಾಲ ಖಾತೆಗಳು ಸುಸ್ತಿಯಾಗಿದ್ದು ಇವುಗಳ ಒಟ್ಟು ಸುಸ್ತಿ ಮೊತ್ತ ರೂ. 156.81 ಲಕ್ಷಗಳಾಗಿರುತ್ತದೆ. ಇದರಲ್ಲಿ 01 ಸಾಲ ಖಾತೆ ಮುಕ್ತಾಯವಾಗಿದ್ದು ಇದರ ಮೊತ್ತ ರೂ. 39.17 ಲಕ್ಷಗಳಾಗಿರುತ್ತದೆ. ಇನ್ನು 01 ಸಾಲ ಖಾತೆಯ ಸಾಲ ವಸೂಲಾತಿಗೆ ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ಸಹಕಾರಿಯ ಪರವಾಗಿ ಅವಾರ್ಡ ಆಗಿದ್ದು, ಇದರ ವಸೂಲಾತಿಗೆ ಸಂಬಂಧಪಟ್ಟಂತೆ ಬಹಿರಂಗ ಹರಾಜು ಪ್ರಕ್ರಿಯೆಗೆ ಇ.ಪಿ.ಕಾರ್ಯ ನಡೆಯುತ್ತಿದೆ. ಈ ಸಾಲಗಾರರು ಮರಣ ಹೊಂದಿದ್ದು ಸಾಲಗಾರರ ವಾರಸುದಾರರು ನ್ಯಾಯಾಲಯದಲ್ಲಿ ರೂ.15 ಲಕ್ಷ ಕಟ್ಟಿರುವುದು ಸಹ ನಮ್ಮ ಸಹಕಾರಿಗೆ ಬಂದಿರುತ್ತದೆ. ಈ ಸಾಲ ಖಾತೆಯ ವಾರಸುದಾರರು ಒಂದೇ ಬಾರಿಗೆ ನಾವು ಸಾಲ ಮುಕ್ತಾಯ ಮಾಡುತ್ತೇವೆ. ನಮಗೆ ಬಡ್ಡಿಯಲ್ಲಿ ವಿನಾಯಿತಿ ನೀಡಬೇಕೆಂದು ಮನವಿ ಸಹ ಮಾಡಿರುತ್ತಾರೆ. ಇನ್ನು ಉಳಿದ ಎರಡು ಸಾಲಗಾರರು ಇಲ್ಲಿಯ ತನಕ ಬಡ್ಡಿಯನ್ನು ಸಂಪೂರ್ಣವಾಗಿ ಪಾವತಿ ಮಾಡಿದ್ದು ಕೇವಲ ಅಸಲು ಕಂತುಗಳು ಮಾತ್ರ ಬಾಕಿ ಇರುತ್ತದೆ.

ಜಾಮೀನು ಸಾಲದಲ್ಲಿ 06 ಸಾಲ ಖಾತೆಗಳು ಸುಸ್ತಿಯಾಗಿದ್ದು ಇದರ ಮೊತ್ತ ರೂ. 1.06 ಲಕ್ಷಗಳು ಮಾತ್ರ ಇರುತ್ತದೆ. ಇದರಲ್ಲಿ ಈಗಾಗಲೇ 02 ಸುಸ್ತಿ ಸಾಲ ಖಾತೆಗಳು ಮುಕ್ತಾಯವಾಗಿರುತ್ತದೆ. ಇನ್ನು ಕೇವಲ 04 ಸುಸ್ತಿ ಸಾಲ ಖಾತೆಗಳು ಪ್ರತಿ ತಿಂಗಳು ಅಲ್ಪ ಪ್ರಮಾಣದಲ್ಲಿ ಪಾವತಿ ಮಾಡುತ್ತಾ ಬಂದಿರುತ್ತಾರೆ.

ಅಡಮಾನ ಸಾಲ ಖಾತೆಗಳಲ್ಲಿ 09 ಸಾಲ ಖಾತೆಗಳು ಸುಸ್ತಿಯಾಗಿದ್ದು ಇವುಗಳ ಮೊತ್ತ ರೂ. 199 ಲಕ್ಷಗಳಿರುತ್ತದೆ. ಇದರಲ್ಲಿ 08 ಸುಸ್ತಿ ಸಾಲ ಖಾತೆಗಳಿಗೆ ಬಡ್ಡಿ ಪಾವತಿ ಮಾಡುತ್ತಾ ಬಂದಿರುತ್ತಾರೆ. ಕೇವಲ ಅಸಲಿಗೆ ಸ್ವಲ್ಪ ಪ್ರಮಾಣದಲ್ಲಿ ಮಾತ್ರ ಬಂದಿರುತ್ತದೆ. ಇನ್ನು ಉಳಿದ 01 ಸಾಲ ಖಾತೆಗೆ ವಸೂಲಾತಿಗೆ ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ಸಹಕಾರಿಯ ಪರವಾಗಿ ಅವಾರ್ಡ ಆಗಿರುತ್ತದೆ. ಇವರು ರೂ.43 ಲಕ್ಷ ಸಹಕಾರಿಗೆ ಪಾವತಿಸಿ ಬಡ್ಡಿ ವಿನಾಯಿತಿಗೋಸ್ಕರ ಮೇಲ್ಮನವಿ ನ್ಯಾಯಾಧೀಕರಣಕ್ಕೆ ಹೋಗಿರುತ್ತದೆ.

ಸುಸ್ತಿ ಸಾಲಗಳ ಪೈಕಿ ಕೆಲವು ದೀರ್ಘ ಸುಸ್ತಿದಾರ ಸಾಲಗಾರರು ಪೂರ್ತಿ ಸಾಲವನ್ನು ಒಂದೇ ಬಾರಿಗೆ ತೀರಿಸಲು ಬಡ್ಡಿ ಬಾಕಿಯಲ್ಲಿ ವಿನಾಯಿತಿ ಕೋರಿರುತ್ತಾರೆ. ಅಂತಹ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕ ಮಂಡಳಿ ಬಡ್ಡಿ ವಿನಾಯಿತಿಯಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲು ಸರ್ವ ಸದಸ್ಯರು ಅನುಮತಿ ನೀಡಬೇಕೆಂದು ಮನವಿ ಮಾಡುತ್ತೇನೆ.

**5. ಹೂಡಿಕೆಗಳು :**

2024–25 ನೇ ಸಾಲಿನ ಪ್ರಾರಂಭದಲ್ಲಿ ಸಹಕಾರಿಯ ಒಟ್ಟು ಹೂಡಿಕೆಗಳು ರೂ 2066.31 ಲಕ್ಷಗಳಿತ್ತು. ಈ ಮೊತ್ತ ಸೌಹಾರ್ದ ಕಾಯ್ದೆ ಪ್ರಕಾರ ನಿಗದಿಪಡಿಸಿದ್ದ ದ್ರವ್ಯಾಸ್ತಿ ನಿರ್ವಹಣಾ ಮಾರ್ಗಸೂಚಿ ಪ್ರಕಾರ ಮಾಡಬೇಕಿದ್ದ ಹೂಡಿಕೆಗಳಿಗಿಂತ ರೂ. 441 ಲಕ್ಷಗಳು ಅಧಿಕವಾಗಿ ತೊಡಗಿಸಿದ್ದವು. ವರದಿ ಸಾಲಿನಲ್ಲಿ ಸಹಕಾರಿಯು ಹೂಡಿಕೆ ಮಾಡಿದ್ದ ಬ್ಯಾಂಕಿನ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಪ್ರತಿ ಮಾಹೆ ನಡೆಯುವ ಆಡಳಿತ, ಆಡಿಟ್ ಮತ್ತು ಹೂಡಿಕೆ ಉಪಸಮಿತಿ ಸಭೆಗಳಲ್ಲಿ ದೀರ್ಘವಾಗಿ ಚರ್ಚಿಸಿ ನಾವು ಹೂಡಿಕೆ ಮಾಡಿದ್ದ ಕೆಲವು ಸಹಕಾರಿ ಬ್ಯಾಂಕ್‌ಗಳಲ್ಲಿನ ಹೊಡಿಕೆಯನ್ನು ವಾಪಸ್ಸು ಪಡೆದು ರಿಸರ್ವ್ ಬ್ಯಾಂಕ್ ಅಂಗೀಕೃತ ಸಣ್ಣ ಫೈನಾನ್ಸ್ ಬ್ಯಾಂಕ್‌ಗಳಲ್ಲಿನ ಉಳಿತಾಯ ಖಾತೆಗಳಲ್ಲಿ ದ್ರವ್ಯಾಸ್ತಿಯನ್ನಾಗಿ ತೊಡಗಿಸಿದ್ದೇವೆ. ಇದರಿಂದಾಗಿ 2024–25 ನೇ ಸಾಲಿನ ಕೊನೆಗೆ ಹೂಡಿಕೆ ಮೊತ್ತ 1918.18 ಲಕ್ಷಗಳಿಗೆ ಇಳಿದು ವರದಿ ಸಾಲಿನಲ್ಲಿ 148.13 ಲಕ್ಷದಷ್ಟು ಕಡಿಮೆಯಾಗಿರುತ್ತದೆ.

**6. ಮೀಸಲು ಮತ್ತು ಇತರ ನಿಧಿಗಳು**

2024–25ನೇ ಸಾಲಿನ ಪ್ರಾರಂಭದಲ್ಲಿ ಸಹಕಾರಿಯ ಮೀಸಲು ಮತ್ತು ಇತರ ನಿಧಿಗಳ ಮೊತ್ತ ರೂ. 1478.61 ಲಕ್ಷಗಳಿತ್ತು. ವರದಿ ಸಾಲಿನಲ್ಲಿ ಸಹಕಾರಿಯು ಗಳಿಸಿರುವ ಉತ್ತಮ ಲಾಭದಿಂದಾಗಿ ವರದಿ ಸಾಲಿನ ನಿವ್ವಳ ಲಾಭ ರೂ. 292.86 ಲಕ್ಷಗಳ ಪೈಕಿ ರೂ. 244 ಲಕ್ಷಗಳು ಮೀಸಲು ಮತ್ತು ಇತರ ನಿಧಿಗಳ ಮೊತ್ತವು 2024–25ರಲ್ಲಿದ್ದ ರೂ.1478.61 ಗಳಿಂದ ರೂ. 1722.60 ಲಕ್ಷಗಳಾಗಿದ್ದು. ಇದರಿಂದಾಗಿ ಈ ಸಾಲಿನಲ್ಲಿ ರೂ.243.99 ಲಕ್ಷಗಳಷ್ಟು ಮೀಸಲು ಮತ್ತು ಇತರ ನಿಧಿಗಳಲ್ಲಿ ಹೆಚ್ಚಳವಾಗಿರುವುದು ಉತ್ತಮ ಪ್ರಗತಿ.

**7. ದುಡಿಯುವ ಬಂಡವಾಳ**

ದುಡಿಯುವ ಬಂಡವಾಳ ಎಂದರೆ ಒಟ್ಟುಗೂಡಿಸಿದ ಪಾವತಿಯಾದ ಷೇರು ಬಂಡವಾಳ ರೂ. 146.13, ಲಕ್ಷಗಳು. ಎಲ್ಲಾ ರೂಪದಲ್ಲಿ ಸ್ವೀಕರಿಸಿದ ಠೇವಣಿಗಳು ರೂ. 2639.99 ಲಕ್ಷಗಳು, ಠೇವಣಿಗಳ ಮೇಲೆ ಕ್ರೋಢೀಕರಿಸಿದ ಬಡ್ಡಿ ರೂ. 57.67 ಲಕ್ಷಗಳು, ಮೀಸಲು ನಿಧಿಯ ಇತರ ನಿಧಿಗಳು ರೂ. 1722.61 ಲಕ್ಷಗಳು, ಅಂದರೆ 31–03–2025 ಕ್ಕೆ ಈ ಮಹಾಸಭೆಯು ಲಾಭ ಹಂಚಿಕೆಗೆ ಅನುಮೋದನೆ ನೀಡಿದ ನಂತರ ರೂ. 244 ಲಕ್ಷಗಳಷ್ಟು ಮೀಸಲು ನಿಧಿ ಮತ್ತು ಇತರೆ ನಿಧಿಗಳಿಗೆ ಸೇರಲಿದ್ದು ಸಹಕಾರಿಯ ದುಡಿಯುವ ಬಂಡವಾಳ ರೂ 4566.41 ಲಕ್ಷ ತಲುಪಲಿದೆ. ಪ್ರತಿ ತ್ರೈಮಾಸಿಕದ ನಂತರ ಉಳಿಯುವ ದುಡಿಯುವ ಬಂಡವಾಳದ 5%ಗರಿಷ್ಠ ಅಂದರೆ ರೂ.228 ಲಕ್ಷದಷ್ಟು ಒಬ್ಬ ಸದಸ್ಯನಿಗೆ ಸಾಲ ನೀಡಲು ಅವಕಾಶ ಇರುತ್ತದೆ.

**8 ನಿವ್ವಳ ಲಾಭ ಮತ್ತು ಲಾಭಾಂಶ ವಿತರಣೆ**

ಸಹಕಾರಿಯ 2024–25 ನೇ ಸಾಲಿನ ಲೆಕ್ಕಪರಿಶೋದನೆ ಮಾಡಿದ ಲೆಕ್ಕಪರಿಶೋಧಕರಾದ ಶ್ರೀ.ಹೆಚ್.ಶಿವಕುಮಾರ್ ರವರು ವರದಿ ನೀಡಿದ್ದು ಅದರಂತೆ ವರದಿ ಸಾಲಿನಲ್ಲಿ ಸಹಕಾರಿಯು ರೂ.292.86 ಲಕ್ಷಗಳ ನಿವ್ವಳ ಲಾಭವನ್ನು ಗಳಿಸಿರುತ್ತದೆ. ಇದು 2023–24 ನೇ ಅಂದರೆ ಕಳೆದ ಸಾಲಿನಲ್ಲಿ ಗಳಿಸಿದ್ದ 163.06 ಲಕ್ಷಗಳಿಗಿಂತ ರೂ.129.80 ಲಕ್ಷ ಅಧಿಕ ಲಾಭ ದೊರೆತಿದೆ. ಈ ಪ್ರಗತಿಗೆ ಮುಖ್ಯ ಕಾರಣ 2024–25 ನೇ ಸಾಲಿನಲ್ಲಿ ಎರಡು ದೀರ್ಘಾವಧಿ ಸುಸ್ತಿ ಸಾಲ ವಸೂಲಾತಿಯಿಂದಾಗಿ ರೂ.120.82 ಲಕ್ಷದಷ್ಟು ಬಡ್ಡಿ ದೊರೆತಿದ್ದು ಲೆಕ್ಕ ಪರಿಶೋಧಕರು ತಮ್ಮ ವರದಿಯಲ್ಲಿ ನಮ್ಮ ಸಹಕಾರಿಯ ವ್ಯವಹಾರಗಳ ಪರಿಶೀಲನೆ ನಂತರ ನಮ್ಮ ಸಹಕಾರಿಗೆ 'ಎ' ವರ್ಗ ಎಂದು ವರದಿ ನೀಡಿದ್ದಾರೆ.

ನಿವ್ವಳ ಲಾಭ ರೂ.292.86 ಲಕ್ಷಗಳನ್ನು ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ.

| ಕ್ರಮ ಸಂಖ್ಯೆ | ಆದಾಯ ಹಂಚಿಕೆ | ಶೇಕಡಾವಾರು | ರೂ. (ಲಕ್ಷಗಳಲ್ಲಿ) |
|---|---|---|---|
| 1 | ಮೀಸಲು ನಿಧಿ | 25% | 73.22 |
| 2 | ಸಾಮಾನ್ಯ ಕ್ಷೇಮಾಭಿವೃದ್ಧಿ ನಿಧಿ | 5% | 14.64 |
| 3 | ಸಹಕಾರ ಅಕಾಡೆಮಿ | 0.5 | 1.46 |
| 4 | ಕಾರ್ಯನಿರ್ವಾಹಣ ಮೀಸಲು ನಿಧಿ | 20% | 58.57 |
| 5 | ಸಹಕಾರಿ ಶಿಕ್ಷಣ ನಿಧಿ | 2% | 5.86 |
| 6 | ಮಹೋತ್ಸವ ನಿಧಿ | – | 1.00 |
| 7 | ಮರಣ ಪರಿಹಾರ ನಿಧಿ | – | 0.50 |
| 8 | ಕಟ್ಟಡ ನಿಧಿ | – | 75.00 |
| 9 | ವಸೂಲಾತಿಯಾಗದ ಮೀಸಲು ಸಾಲ ನಿಧಿ | – | 0.55 |
| 10 | ಕೊರತೆ ನೀಗುವಿಕೆ ನಿಧಿ | – | 20.61 |
| 11 | ನೌಕರರ ಕ್ಷೇಮಭಿವೃದ್ಧಿ ನಿಧಿ | – | 0.70 |
| 12 | ನೌಕರರ ಬೋನಸ್ | – | 4.23 |
| 13 | ಸದಸ್ಯರಿಗೆ ಲಾಭಾಂಶ | 25% | 36.52 |
| | ಒಟ್ಟು | | **292.86** |

**9. ನಿರ್ದೇಶಕ ಮಂಡಳಿ ಮತ್ತು ಉಪಸಮಿತಿ ಸಭೆಗಳು**

ಸಹಕಾರಿಯ ಕಾರ್ಯಕಲಾಪಗಳು ಸುಗಮವಾಗಿ ನಡೆಸಲು ತಮ್ಮ ಅನುಭವ ಹಾಗೂ ಸಮಯವನ್ನು ಎಲ್ಲಾ ನಿರ್ದೇಶಕರುಗಳು ನೀಡಿರುತ್ತಾರೆ. ವರದಿ ಸಾಲಿನಲ್ಲಿ ಕೆಳಕಂಡಂತೆ ನಿರ್ದೇಶಕ (ಆಡಳಿತ) ಮಂಡಳಿ ಸಭೆಗಳು, ಸಾಲದ ಉಪಸಮಿತಿ ಸಭೆಗಳು ಹಾಗೂ ಆಡಳಿತ ಹಾಗೂ ಆಡಿಟ್ ಉಪಸಮಿತಿ ಸಭೆಗಳು ಜರುಗಿರುತ್ತದೆ. ಸಹಕಾರಿಯ ಸರ್ವತೋಮುಖದ ಅಭಿವೃದ್ಧಿಗೆ ಕಾರಣರಾದ ಎಲ್ಲಾ ನಿರ್ದೇಶಕರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.

| ಸಭೆಗಳ ವಿವರಗಳು | ಒಟ್ಟು ನಡೆದ ಸಭೆಗಳು |
|---|---|
| ನಿರ್ದೇಶಕ (ಆಡಳಿತ) ಮಂಡಳಿ ಸಭೆ | 13 |
| ಸಾಲ ಮಂಜೂರಾತಿ ಮತ್ತು ವಸೂಲಾತಿ ಉಪಸಮಿತಿ ಸಭೆ | 06 |
| ಆಡಳಿತ ಮತ್ತು ಆಡಿಟ್ ಉಪಸಮಿತಿ ಸಭೆ | 12 |
| ಸದಸ್ಯತ್ವ ಉಪಸಮಿತಿ ಸಭೆ | 13 |

**10. ಮರಣೋತ್ತರ ಪರಿಹಾರ ನಿಧಿ**

ವರದಿ ಸಾಲಿನಲ್ಲಿ 08 ಜನ ಸದಸ್ಯರು ಮರಣ ಹೊಂದಿದ್ದು ಇವರಲ್ಲಿ 08 ಜನ ವಾರಸುದಾರರಿಗೆ ರೂ. 80,000/– ಮರಣ ಪರಿಹಾರ ನಿಧಿಯಿಂದ ನೀಡಲಾಗಿದೆ.

**11. ಇ –ಸ್ಟ್ಯಾಂಪಿಂಗ್ ಸೇವೆ**

ಸರಕಾರಿ ಸದಸ್ಯರುಗಳ ಹಾಗೂ ಸಾರ್ವಜನಿಕರ ಸೇವೆಯನ್ನು ಗಮನದಲ್ಲಿಟ್ಟುಕೊಂಡು ಮುದ್ರಾಂಶ ಪತ್ರಗಳ (ಇ–ಸ್ಟ್ಯಾಂಪಿಂಗ್) ಸೇವೆಯನ್ನು ಒದಗಿಸಲಾಗುತ್ತಿದೆ.

**12. ಲಾಭಾಂಶ ವಿತರಣೆ**

ಕಳೆದ 11 ವರ್ಷಗಳಿಂದ ಸಹಕಾರಿಯ ಸದಸ್ಯರಿಗೆ ಶೇಕಡ 25% ರಷ್ಟು ಡಿವಿಡೆಂಡ್ (ಲಾಭಾಂಶ) ನೀಡಲಾಗುತ್ತಿದ್ದು ವರದಿ ಸಾಲಿನ ಲಾಭ ಹಂಚಿಕೆಯಲ್ಲಿಯೂ ಶೇ. 25% ರಷ್ಟು ಲಾಭಾಂಶ ವಿತರಣೆ ಮಾಡಲು ಸಾಮಾನ್ಯ ಸದಸ್ಯರ ಸಭೆಯ ಅನುಮೋದನೆಗೆ ಶಿಫಾರಸ್ಸು ಮಾಡಲಾಗಿದೆ.

**13. ಕೃತಜ್ಞತೆಗಳು ಹಾಗೂ ಅಭಿನಂದನೆಗಳು**

ಮಾನ್ಯ ಸದಸ್ಯರು ಸಹಕಾರಿಯ ಬೆನ್ನೆಲುಬಾಗಿದ್ದು, ಸಹಕಾರಿಯಲ್ಲಿ ಲಭ್ಯವಿರುವ ಸಮಗ್ರ ಸೇವೆ ಮತ್ತು ಸೌಲಭ್ಯಗಳನ್ನು ಸಕ್ರಿಯವಾಗಿ ಬಳಸಿಕೊಂಡಲ್ಲಿ, ಸಹಕಾರಿಯ ಉಜ್ವಲ ಭವಿಷ್ಯ ಮತ್ತು ಸುಭದ್ರತೆಗಾಗಿ ನಿರ್ದೇಶಕ ಮಂಡಳಿಯು ವಹಿಸುತ್ತಿರುವ ಕಾಳಜಿ ಮತ್ತು ನಿರಂತರ ಪರಿಶ್ರಮಕ್ಕೆ ಸಾರ್ಥಕತೆ ಲಭಿಸಿ, ನಾಡಿನ ಉತ್ತಮ ಸಹಕಾರಿ ಪಟ್ಟಿಯಲ್ಲಿ ನಮ್ಮ ಸಹಕಾರಿಯ ಹೆಸರು ಮುಂಚೂಣಿಗೆ ಬರಲು ಸದಸ್ಯರ ಪ್ರೋತ್ಸಾಹ ಮತ್ತು ಬೆಂಬಲವನ್ನು ಕೋರುತ್ತೇನೆ.

ನಮ್ಮ ಸಹಕಾರಿಯ ಸರ್ವತೋಮುಖ ಬೆಳವಣಿಗೆಗೆ ಪ್ರೋತ್ಸಾಹ, ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡುತ್ತಾ ಬಂದಿರುವ ಸರ್ವಸದಸ್ಯರುಗಳಿಗೂ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸುತ್ತಿರುವ ಎಲ್ಲಾರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಸಮಯೋಚಿತವಾಗಿ ಮಾರ್ಗದರ್ಶನವನ್ನು ನೀಡುತ್ತಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಸಹಕಾರಿ ಸಂಘಗಳ ಜಂಟಿ ನಿಬಂಧಕರು, ಲೆಕ್ಕ ಪರಿಶೋಧಕರು, ಕಾನೂನು ಸಲಹೆಗಾರರು, ಮೌಲ್ಯಮಾಪಕರು ಮತ್ತು ನಮ್ಮ ವ್ಯವಹಾರಗಳಿಗೆ ಸಹಕಾರ ನೀಡುತ್ತಿರುವ ಬ್ಯಾಂಕುಗಳಿಗೆ ಕೃತಜ್ಞತೆಗಳು.

ನಮ್ಮ ಈ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಸಹಕಾರಿಯ ಅಡಳಿತ ಮಂಡಳಿಯ ಉಪಾಧ್ಯಕ್ಷರು, ನಿರ್ದೇಶಕರು, ವೃತ್ತಿಪರ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಯಾವುದೇ ಸಂದರ್ಭದಲ್ಲೂ ಬೇಸರಿಸದೆ ಸದಾ ನಗುಮುಖದ ಸೇವೆ ನೀಡುತ್ತಾ ಬಂದಿರುವ ಸಿಬ್ಬಂದಿ ವರ್ಗದವರೆಲ್ಲರಿಗೂ  ವಿಶೇಷವಾಗಿ ವಂದನೆಗಳು.

ನಮ್ಮ ಸಹಕಾರಿಯ ಸರ್ವತೋಮುಖ ಅಭಿವೃದ್ಧಿಯು, ಸೌಜನ್ಯಯುತ ಅಡಳಿತ ಮತ್ತು ದಕ್ಷ ನಾಯಕತ್ವದಿಂದ ಸಾಧ್ಯವಾಗಿವೆ. ತಮ್ಮೆಲ್ಲರ ಪ್ರೋತ್ಸಾಹ ನಮಗೆ ಸದಾಕಾಲ ಇರಲಿ ಎಂದು ಅಶಿಸುತ್ತಾ, ವಿನಯಪೂರ್ವಕವಾಗಿ ವಂದಿಸಿ ಈ ಆಡಳಿತ ಮಂಡಳಿಯ ವರದಿಯನ್ನು ಮುಕ್ತಾಯಗೊಳಿಸುತ್ತೇವೆ.

" ಸರ್ವೇ ಜನಾಃ ಸುಖಿನೋಭವಂತು"

ಜೈ ಕರ್ನಾಟಕ ಜೈಹಿಂದ್ ಜೈ ಸಹಕಾರಿ

ಸ್ಥಳ : ಬೆಂಗಳೂರು
ದಿನಾಂಕ: 14–08–2025

**ಶ್ರೀ ಎಂ. ಶಿವರುದ್ರಪ್ಪ**
ಅಧ್ಯಕ್ಷರು

**ಕಾರ್ಯಸೂಚಿ 08 :**

# 2024–25ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನು ಮತ್ತು ಲೆಕ್ಕ ಪರಿಶೋಧಿತ ಲೆಕ್ಕಪತ್ರಗಳ ಮಂಡನೆ ಹಾಗೂ ಅಂಗೀಕಾರ

## ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್

ನಂ. 658/2ಎ, 2ನೇ ಮಹಡಿ, ಶ್ರೀ ಕೃಷ್ಣ ಕಾಂಪ್ಲೆಕ್ಸ್, ಬಸೆಟ್ಟಿಪೇಟೆ, ಚಿಕ್ಕಪೇಟೆ ಕ್ರಾಸ್, ಬೆಂಗಳೂರು – 560 053.

## 31–03–2025ಕ್ಕೆ ಆಯವ್ಯಯ ಪಟ್ಟಿ

| ಹೊಣೆಗಾರಿಕೆ | ಟಿಪ್ಪಣಿ ಸಂ. | 31–03–2025 | 31–03–2024 | ಆಸ್ತಿಗಳು | ಟಿಪ್ಪಣಿ ಸಂ. | 31–03–2025 | 31–03–2024 |
|---|---|---|---|---|---|---|---|
| ಬಂಡವಾಳ | 1 | 1,46,13,200 | 1,46,26,600 | ಸ್ಥಿರಾಸ್ತಿಗಳು (ಪುಟ ಸಂಖ್ಯೆ 17 ರಲ್ಲಿದ್ದಂತೆ) | 5 | 8,74,058 | 9,50,696 |
| ಮೀಸಲು ಮತ್ತು ಇತರೆ ನಿಧಿಗಳು | 2 | 17,22,60,725 | 14,78,61,223 | ಹೂಡಿಕೆಗಳು | 6 | 19,42,14,015 | 20,87,29,963 |
| ಸ್ವರ್ಣ ಭಾರತಿ ಸಹಕಾರ ಬ್ಯಾಂಕ್ ನಿಯಮಿತ | | – | – | | | | |
| ಠೇವಣಿಗಳು | 3 | 26,39,98,790 | 26,58,78,156 | ಸಾಲಗಳು ಮತ್ತು ಮುಂಗಡಗಳು | 7 | 21,36,15,093 | 22,58,75,943 |
| ಪ್ರಸ್ತುತ ಹೊಣೆಗಾರಿಕೆಗಳು ಮತ್ತು ನಿಬಂಧನೆಗಳು | 4 | 1,42,92,362 | 2,00,75,981 | ಪ್ರಸ್ತುತ ಆಸ್ತಿಗಳು | 8 | 5,64,61,911 | 1,28,85,358 |
| ಒಟ್ಟು | | 46,51,65,077 | 44,84,41,960 | ಒಟ್ಟು | | 46,51,65,077 | 44,84,41,960 |

ಪ್ರಮುಖ ಲೆಕ್ಕಪತ್ರ ನೀತಿಗಳು ಮತ್ತು ಖಾತೆಗಳಿಗೆ ಸಂಬಂಧಿಸಿದ ಟಿಪ್ಪಣಿಗಳು– ಟಿಪ್ಪಣಿ 17

**ಹೆಚ್. ಶಿವಕುಮಾರ್**
ಲೆಕ್ಕಪರಿಶೋಧಕರು

ಸಹಿ/–

**ಹೆಚ್. ಶಿವಕುಮಾರ್**
**ಪ್ರೊಪ್ರೈಟರ್**
ಎಂ.ನಂ. 212829
ಸ್ಥಳ : ಬೆಂಗಳೂರು
ದಿನಾಂಕ : 12.08.2025

ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್

ಸಹಿ/–
ಎಂ. ಶಿವರುದ್ರಪ್ಪ
ಅಧ್ಯಕ್ಷರು

ಸಹಿ/–
ಬಿ ಆರ್ ಜಯದೇವ
ಉಪಾಧ್ಯಕ್ಷರು

ಸಹಿ/–
ಡಾ. ಹೆಚ್.ನರಸಿಂಹಮೂರ್ತಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿ

## ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

ನಂ. 658/2ಎ, 2ನೇ ಮಹಡಿ, ಶ್ರೀ ಕೃಷ್ಣ ಕಾಂಪ್ಲೆಕ್ಸ್, ಬಸೆಟ್ಟಿಪೇಟೆ, ಚಿಕ್ಕಪೇಟೆ ಕ್ರಾಸ್, ಬೆಂಗಳೂರು – 560 053.

# 31–03–2025ಕ್ಕೆ ಆದಾಯ ನಷ್ಟ ತಃಖ್ತೆ

| ವಿವರಗಳು | ಟಿಪ್ಪಣಿ | 31–03–2025 | 31–03–2024 | ವಿವರಗಳು | ಟಿಪ್ಪಣಿ | 31–03–2025 | 31–03–2024 |
|---|---|---|---|---|---|---|---|
| ಠೇವಣಿಗಳ ಮೇಲಿನ ಬಡ್ಡಿ | 9 | 1,73,70,197 | 1,85,93,838 | ಸಾಲಗಳ ಮೇಲೆ ಸ್ವೀಕರಿಸಿದ ಬಡ್ಡಿ | 14 | 3,43,34,583 | 2,12,71,505 |
| ಹಣಕಾಸು ವೆಚ್ಚ | 10 | 922 | 84,278 | ಸಾಲಗಳ ಮೇಲೆ ಸುಸ್ತಿ ಬಡ್ಡಿ | | 5,43,227 | 3,74,855 |
| ಆಡಳಿತಾತ್ಮಕ ವೆಚ್ಚ | 11 | 8,24,937 | 5,93,580 | ಹೂಡಿಕೆಗಳ ಮೇಲೆ ಸೇರ್ಪಡೆಯಾದ ಮತ್ತು ಸ್ವೀಕೃತವಾದ ಬಡ್ಡಿ | | 1,46,73,973 | 1,74,28,081 |
| ನೌಕರರ ಸಂಭಾವನೆ ಅನುಕೂಲಗಳು | 12 | 33,68,587 | 35,32,905 | ಉಳಿತಾಯ ಖಾತೆ ಖಾತೆಯ ಮೇಲಿನ ಬಡ್ಡಿ | | 21,31,280 | 2,71,189 |
| ಇತರೆ ವೆಚ್ಚಗಳು | 13 | 9,79,759 | 5,95,880 | ಸೇವಾ ವೆಚ್ಚಗಳಿಂದ | | 2,53,011 | 4,54,526 |
| | | | | ಇತರೆ ಆದಾಯ | 15 | 47,470 | 1,06,028 |
| ಸವಕಳಿ | | 1,53,114 | 2,00,009 | | | | |
| ನಿವ್ವಳ ಆದಾಯ ಮುಂಮಪು | | 2,92,86,028 | 1,63,05,694 | | | | |
| **ಒಟ್ಟು** | | **5,19,83,544** | **3,99,06,184** | **ಒಟ್ಟು** | | **5,19,83,544** | **3,99,06,184** |
| ವಿನಿಯೋಗಗಳು | 16 | 2,56,34,028 | 1,27,44,960 | | | 2,92,86,028 | 1,63,05,694 |
| ಪ್ರಸ್ತಾವಿತ ಲಾಭಾಂಶ | | 36,52,000 | 35,60,734 | | | | |
| **ಒಟ್ಟು** | | **2,92,86,028** | **1,63,05,694** | **ಒಟ್ಟು** | | **2,92,86,028** | **1,63,05,694** |

**ಪ್ರಮುಖ ಲೆಕ್ಕಪತ್ರ ನೀತಿಗಳು ಮತ್ತು ಖಾತೆಗಳಿಗೆ ಸಂಬಂಧಿಸಿದ ಟಿಪ್ಪಣಿಗಳು**

**ಹೆಚ್. ಶಿವಕುಮಾರ್**
**ಲೆಕ್ಕಪರಿಶೋಧಕರು**

**ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್**

ಸಹಿ/–
**ಹೆಚ್. ಶಿವಕುಮಾರ್**
**ಪ್ರೊಪ್ರೈಟರ್**
ಎಂ.ನಂ. 212829
ಸ್ಥಳ : ಬೆಂಗಳೂರು
ದಿನಾಂಕ : 12.08.2025

| ಸಹಿ/– | ಸಹಿ/– | ಸಹಿ/– |
|---|---|---|
| ಎಂ. ಶಿವರುದ್ರಪ್ಪ | ಬಿ ಆರ್ ಜಯದೇವ | ಡಾ. ಹೆಚ್.ನರಸಿಂಹಮೂರ್ತಿ |
| ಅಧ್ಯಕ್ಷರು | ಉಪಾಧ್ಯಕ್ಷರು | ಮುಖ್ಯ ಕಾರ್ಯನಿರ್ವಹಣಾಧಿಕಾರಿ |

## ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್

ನಂ. 658/2ಎ, 2ನೇ ಮಹಡಿ, ಶ್ರೀ ಕೃಷ್ಣ ಕಾಂಪ್ಲೆಕ್ಸ್, ಬಸೆಟ್ಟಿಪೇಟೆ, ಚಿಕ್ಕಪೇಟೆ ಕ್ರಾಸ್, ಬೆಂಗಳೂರು – 560 053.

### ಹಣಕಾಸು ಪಟ್ಟಿಗೆ ಅಗತ್ಯ ಭಾಗವಾಗಿರುವ ಪಟ್ಟಿಗಳ ರಚನೆ

| ವಿವರಗಳು | ಟಿಪ್ಪಣಿ | 2024–25 | 2023–24 |
|---|---|---|---|
| **ಟಿಪ್ಪಣಿ 1 – ಷೇರು ಬಂಡವಾಳ** | | | |
| ಅಧಿಕೃತ ಷೇರು ಬಂಡವಾಳ | | 5,00,00,000 | 5,00,00,000 |
| ವಿತರಿಸಿದ ವಂತಿಗೆಯ ಮತ್ತು ಪಾವತಿಯಾದ ಬಂಡವಾಳ ರೂ.100ರ 1,46,266 ಷೇರುಗಳು | | 1,46,13,200 | 1,46,26,600 |
| **ಒಟ್ಟು** | **1** | **1,46,13,200** | **1,46,26,600** |
| **ಟಿಪ್ಪಣಿ 2 – ಮೀಸಲು ಮತ್ತು ಇತರೆ ನಿಧಿಗಳು** | | | |
| ಮೀಸಲು ನಿಧಿ | | 6,37,82,638 | 5,64,54,632 |
| ಮಹೋತ್ಸವ ನಿಧಿ | | 21,01,963 | 20,01,963 |
| ಮರಣ ಪರಿಹಾರ ನಿಧಿ | | 15,69,599 | 15,99,599 |
| ಸಾಮಾನ್ಯ ಕ್ಷೇಮಾಭಿವೃದ್ಧಿ ನಿಧಿ | | 1,01,48,352 | 87,44,051 |
| ಕಟ್ಟಡ ನಿಧಿ | | 1,50,00,110 | 75,00,110 |
| ವಸೂಲಾತಿಯಾಗದ ಮೀಸಲು ಸಾಲ ನಿಧಿ | | 64,99,949 | 64,44,949 |
| ಕಾರ್ಯನಿರ್ವಹಣಾ ಮೀಸಲು ನಿಧಿ | | 4,80,10,899 | 4,21,53,693 |
| ಕೊರತೆ ನೀಗು ನಿಧಿ | | 2,31,19,968 | 2,10,59,458 |
| ಸಹಕಾರ ಅಕಾಡೆಮಿ 0.5% | | 3,22,941 | 1,76,511 |
| ನೌಕರರ ಕ್ಷೇಮಾಭಿವೃದ್ಧಿ ನಿಧಿ | | 17,04,306 | 17,26,257 |
| **ಒಟ್ಟು** | **2** | **17,22,60,725** | **14,78,61,223** |
| **ಟಿಪ್ಪಣಿ 3 – ಠೇವಣಿಗಳು** | | | |
| ಉಳಿತಾಯ ಖಾತೆ | | 5,24,61,639 | 4,66,99,866 |
| ಪುನಾವರ್ತಿತ ಠೇವಣಿ | | 22,47,548 | 38,30,636 |
| ಪುನರ್ ಹೂಡಿಕೆ ನಗದು ಠೇವಣಿ | | 9,27,71,492 | 8,16,78,592 |
| ಸ್ಥಿರ ಠೇವಣಿ | | 11,63,15,952 | 13,34,77,809 |
| ಸುಪ್ರಜ ನಗದು ಠೇವಣಿ | | 2,02,159 | 1,91,253 |
| **ಒಟ್ಟು** | **3** | **26,39,98,790** | **26,58,78,156** |
| **ಟಿಪ್ಪಣಿ 4 – ಪ್ರಸ್ತುತ ಹೊಣೆಗಾರಿಕೆಗಳು ಮತ್ತು ನಿಬಂಧನೆಗಳು** | | | |
| **ಪ್ರಸ್ತುತ ಹೊಣೆಗಾರಿಕೆಗಳು** | | | |
| ಪಾವತಿಸಬೇಕಾದ ರಜೆ ನಗದೀಕರಣ | | 6,28,865 | 6,55,393 |
| ಸೌಹಾರ್ದಕ್ಕೆ ಪಾವತಿಸಬೇಕಾದ ಶುಲ್ಕ | | 59,000 | 59,000 |
| ಸಹಕಾರಿಯ ಶಿಕ್ಷಣ ನಿಧಿ ಬಾಕಿ | | 5,85,721 | 3,26,114 |
| ಇತರೆ ಪ್ರಸ್ತುತ ಹೊಣೆಗಾರಿಕೆಗಳು | | | |
| ಎ) ಠೇವಣಿ ಅವಳಿ ಖಾತೆ | | 3,38,884 | 3,81,159 |
| ಬಿ) ಗುಂಪು ಉಪದಾನ | | 2,47,096 | 3,02,995 |
| ಪ್ರಸ್ತಾವಿಕ ಲಾಭಾಂಶ | | 36,52,000 | 35,60,733 |
| **ಒಟ್ಟು (1)** | **4(1)** | **55,11,566** | **52,85,394** |

| ವಿವರಗಳು | ಟಿಪ್ಪಣಿ | 2024–25 | 2023–24 |
|---|---|---|---|
| **ನಿಬಂಧನೆಗಳು** | | | |
| ಠೇವಣಿಗಳ ಮೇಲಿನ ಬಡ್ಡಿಯ ನಿಬಂಧನೆಗಳು | | 57,67,765 | 1,33,64,406 |
| ನೌಕರರಿಗೆ ಪಾವತಿಸಬೇಕಾದ ಬೋನಸ್ | | 4,23,353 | 4,99,530 |
| ಪಾವತಿಸಬೇಕಾದ ಲೆಕ್ಕಪತ್ರ ಶುಲ್ಕ | | 75,600 | 63,000 |
| ಪಾವತಿಸಬೇಕಾದ ದೂರವಾಣಿ ಶುಲ್ಕ | | 4,000 | 1,000 |
| ಪಾವತಿಸಬೇಕಾದ ಟಿಡಿಎಸ್ | | 7,000 | 7,000 |
| ಪಾವತಿಸಬೇಕಾದ ವಿದ್ಯುತ್ ಶುಲ್ಕ | | 3,500 | 3,500 |
| ಅವಳಿ ಖಾತೆ | | 41,943 | 72,443 |
| ಡಿವಿಡೆಂಟ್ | | 8,99,069 | 7,42,491 |
| ಆಂತರಿಕ ಲೆಕ್ಕಪರಿಶೋಧನಾ ಶುಲ್ಕ | | 35,400 | – |
| ನ್ಯಾಯಾಲಯದ ಖಾತೆ | | 15,00,000 | |
| ಜಿ.ಎಸ್.ಟಿ. | | 23,166 | 37,217 |
| **ಒಟ್ಟು (2)** | **4** | **87,80,796** | **1,47,90,587** |
| **ಒಟ್ಟು (1+2)** | | **1,42,92,362** | **2,00,75,981** |
| **ಟಿಪ್ಪಣಿ 6 – ಹೂಡಿಕೆಗಳು** | | | |
| ಇವುಗಳೊಂದಿಗಿನ ನಿಶ್ಚಿತ ಠೇವಣಿ | | | |
| ಜನತಾ ಸೇವಾ ಸಹಕಾರಿ ಬ್ಯಾಂಕ್ | | 2,50,00,000 | 2,50,00,000 |
| ವೀರಶೈವ ಸಹಕಾರಿ ಬ್ಯಾಂಕ್ ಲಿ. | | 2,77,36,000 | 2,77,36,000 |
| ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ. | | 1,50,00,000 | 2,08,44,936 |
| ತುಮಕೂರು ವೀರಶೈವ ಕೋ–ಆಪರೇಟಿವ್ ಬ್ಯಾಂಕ್ ಲಿ. | | 1,27,00,000 | 1,27,00,000 |
| ಕರ್ನಾಟಕ ರಾಜ್ಯ ಅಪೆಕ್ಸ್ ಕೋ– ಆಪರೇಟಿವ್ ಬ್ಯಾಂಕ್ ಲಿ. | | 11,33,869 | – |
| ವಾಸವಿ ಎಂ.ಎಸ್.ಸಿ.ಎಂ ಕೋ– ಆಪರೇಟಿವ್ ಬ್ಯಾಂಕ್ ಲಿ. | | 3,00,00,000 | 11,33,869 |
| ಯೆಸ್ ಬ್ಯಾಂಕ್ | | 10,00,000 | 2,00,00,000 |
| ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ | | 1,50,00,000 | |
| ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ | | 2,50,00,000 | 2,50,00,000 |
| ಅಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ | | – | 2,50,00,000 |
| ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ | | 1,00,00,000 | 2,50,00,000 |
| ಕರ್ನಾಟಕ ರಾಜ್ಯ ಅಪೆಕ್ಸ್ ಕೋ– ಆಪರೇಟಿವ್ ಬ್ಯಾಂಕ್ ಲಿ. | | 2,92,48,318 | 1,00,00,000 |
| **ಒಟ್ಟು(1)** | | 19,18,18,187 | 1,42,48,318 |
| ಮೇಲ್ಕಂಡ ಠೇವಣಿಗಳಿಂದ ಕೂಡಿಕೊಂಡ ಬಡ್ಡಿಗಳು ಒಟ್ಟು (2) | | 23,95,828 | 20,66,840 |
| **ಒಟ್ಟು(1+2)** | | **19,42,14,015** | **20,87,29,963** |
| **ಟಿಪ್ಪಣಿ 7 – ಸಾಲಗಳು ಮತ್ತು ಮುಂಗಡಗಳು** | | | |
| ಜಾಮೀನು ಸಾಲ | | 2,98,608 | 3,77,033 |
| ಗೃಹ ಕಟ್ಟಡ ನಿರ್ಮಾಣ ಸಾಲ | | 6,91,06,235 | 4,87,35,549 |
| ವ್ಯಾಪಾರ ಸಾಲ | | – | – |
| ಠೇವಣಿಗಳ ಮೇಲಿನ ಸಾಲಗಳು | | 28,77,027 | 14,06,027 |
| ಚಿನ್ನ ಸಾಲ | | 36,36,000 | 8,53,080 |
| ಮದುವೆ ಸಾಲ | | – | – |
| ವಾಹನ ಸಾಲ | | – | 1,50,000 |
| ಅನಿರ್ಬಂಧಿತ ಸಾಲ | | – | – |
| ಅಡಮಾನ ಸಾಲ | | 13,23,92,376 | 16,93,48,886 |
| ಶಿಕ್ಷಣ ಸಾಲ | | – | – |
| ಮೀರೆಳೆತ ಸಾಲ | | 53,04,847 | 50,05,368 |
| **ಒಟ್ಟು** | **7** | **21,36,15,093** | **22,58,75,943** |

| ವಿವರಗಳು | | ಟಿಪ್ಪಣಿ | 2024–25 | 2023–24 |
|---|---|---|---|---|
| **ಟಿಪ್ಪಣಿ 8 – ಪ್ರಸ್ತುತ ಆಸ್ತಿಗಳು** | | | | |
| ಠೇವಣಿಗಳು | | | | |
| ದೂರವಾಣಿ | | | 4,000 | 4,000 |
| ಇ–ಸ್ಟ್ಯಾಂಪಿಂಗ್ | | | 50,000 | 50,000 |
| ಲಾಕರ್ | | | – | – |
| ಬ್ಯಾಂಕಿನಲ್ಲಿನ ನಗದು (ಉಪ ಟಿಪ್ಪಣಿ 1) | | | 5,24,79,261 | 78,63,980 |
| ಕೈ ನಗದು | | | 1,32,873 | 12,23,920 |
| ಇತರೆ ಪ್ರಸ್ತುತ ಆಸ್ತಿಗಳು (ಉಪ ಟಿಪ್ಪಣಿ 2) | | | 37,95,777 | 37,43,458 |
| | ಒಟ್ಟು | 8 | **5,64,61,911** | **1,28,85,358** |
| **ಉಪ ಟಿಪ್ಪಣಿ 1 – ಬ್ಯಾಂಕಿನಲ್ಲಿನ ನಗದು** | | | | |
| ಐ.ಡಿ.ಬಿ.ಐ ಬ್ಯಾಂಕ್ | | | 1,33,22,574 | 15,29,954 |
| ಟಿ.ಜಿ.ಎಂ.ಸಿ | | | 26,140 | 3,33,004 |
| ಟಿ.ವಿ.ಸಿ.ಬಿ | | | 2,88,132 | 1,30,192 |
| ಇ–ಸ್ಟಾಂಪಿಂಗ್ | | | 10,476 | 7,721 |
| ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ | | | – | 53,56,396 |
| ಅಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ | | | 64,611 | 4,10,327 |
| ಯೆಸ್ ಬ್ಯಾಂಕ್ | | | 2,24,37,607 | |
| ಸೂರ್ಯೋದಯ ಸ್ಮಾಲ್ ಫೈನಾನ್ಸ್ ಬ್ಯಾಂಕ್ | | | 1,62,53,336 | |
| ಜನತಾ ಸೇವಾ ಕೋ–ಆಪ್‌ರೇಟಿವ್ ಬ್ಯಾಂಕ್ | | | 76,386 | 96,386 |
| | ಒಟ್ಟು | 8(1) | **5,24,79,261** | **78,63,980** |
| **ಉಪ ಟಿಪ್ಪಣಿ 2 – ಇತರೆ ಪ್ರಸ್ತುತ ಆಸ್ತಿಗಳು** | | | | |
| ಉಪ ಟಿಪ್ಪಣಿ2 – ಇತರೆ ಪ್ರಸ್ತುತ ಆಸ್ತಿಗಳು | | | – | – |
| ಹಬ್ಬದ ಮುಂಗಡ | | | 10,302 | 10,302 |
| ಬಿ.ಡಿ.ಸಿ.ಸಿ ಷೇರು | | | 73,515 | 64,062 |
| ಮುದ್ರಣ ಮತ್ತು ಸ್ಥಾಯಿ ಖಾತೆ | | | 10,100 | 10,100 |
| ಕೆ.ಎಸ್.ಸಿ.ಎಸ್. ಷೇರು ಖಾತೆ | | | 8,00,000 | 8,00,000 |
| ಮುಂಗಡ ಆದಾಯ ತೆರಿಗೆ (2009–10) | | | 28,76,260 | 23,57,777 |
| ಟಿ ಡಿ ಸ್ | | | 25,600 | 25,600 |
| ಸೌಹಾರ್ದ ಕೋ–ಆಪ್‌ರೇಟಿವ್ ಒಕ್ಕೂಟ ಸದಸ್ಯತ್ವ | | | – | |
| ಮುಂಗಡ ದಾವೆ ಶುಲ್ಕ (ಅನಿರ್ಬಂಧಿತ) | | | – | 4,75,617 |
| | ಒಟ್ಟು | 8(2) | **37,95,777** | **37,43,458** |
| **ಟಿಪ್ಪಣಿ 9 ಠೇವಣಿ ಮೇಲೆ ಬಡ್ಡಿ** | | | | |
| ಎಸ್.ಬಿ. ಖಾತೆಯ ಮೇಲಿನ ಬಡ್ಡಿ | | | 12,93,900 | 12,67,251 |
| ಆರ್.ಡಿ. ಖಾತೆಯ ಮೇಲಿನ ಬಡ್ಡಿ | | | 2,41,754 | 1,30,729 |
| ಆರ್‌ಐಡಿ ಖಾತೆಯ ಮೇಲಿನ ಬಡ್ಡಿ | | | 68,47,024 | 63,00,168 |
| ಸುಪ್ರಜ ನಗದು ಪತ್ರ ಖಾತೆಯ ಮೇಲಿನ ಬಡ್ಡಿ | | | 14,767 | 1,06,446 |
| ಸ್ಥಿರ ಠೇವಣಿ ಎಫ್‌ಡಿ ಖಾತೆಯ ಮೇಲಿನ ಬಡ್ಡಿ | | | 89,72,752 | 1,07,89,244 |
| | ಒಟ್ಟು | 9 | **1,73,70,197** | **1,85,93,838** |

| ವಿವರಗಳು | ಟಿಪ್ಪಣಿ | 2024–25 | 2023–24 |
|---|---|---|---|
| **ಟಿಪ್ಪಣಿ 10 – ಹಣಕಾಸು ವೆಚ್ಚ** | | | |
| ಮೀರೆಳೆತದ ಮೇಲಿನ ಬಡ್ಡಿ | | – | – |
| ಮೀರೆಳೆತದ ಮೇಲಿನ ಬಡ್ಡಿ –ಟಿಜಿಎಂಸಿ | | 568 | 27,592 |
| ಮೀರೆಳೆತದ ಮೇಲಿನ ಬಡ್ಡಿ–ಜನತಾ ಸೇವಾ | | – | 56,391 |
| ಬ್ಯಾಂಕ್ ಶುಲ್ಕಗಳು | | 354 | 295 |
| **ಒಟ್ಟು** | **10** | **922** | **84,278** |
| **ಟಿಪ್ಪಣಿ 11 – ಆಡಳಿತಾತ್ಮಕ ವೆಚ್ಚ** | | | |
| ಆಡಿಟ್ ಮತ್ತು ಆಡಳಿತ ಸಮಿತಿ, ಸದಸ್ಯತ್ವ ಸಮಿತಿ, ಸಾಲ ಉಪಸಮಿತಿ ಸಭೆಗಳ ವೆಚ್ಚಗಳು | | 2,73,528 | 2,11,415 |
| ವಾರ್ಷಿಕ ಸರ್ವ ಸಭೆಯ ವೆಚ್ಚಗಳು | | 5,51,409 | 3,82,165 |
| **ಒಟ್ಟು** | **11** | **8,24,937** | **5,93,580** |
| **ಟಿಪ್ಪಣಿ 12 – ಸಿಬ್ಬಂದಿ ವೇತನ ಮತ್ತು ಅನುಕೂಲಗಳು** | | | |
| ವೇತನಗಳು | | 26,99,430 | 29,01,180 |
| ನೌಕರರಿಗೆ ಇಪಿಎಫ್ ಕೊಡುಗೆ | | 2,53,840 | 2,99,172 |
| ಏಕ್ಸ್‌ಗ್ರೇಷಿಯಾ | | 59,000 | – |
| ರಜೆ ನಗದೀಕರಣ | | 2,05,359 | 1,66,322 |
| ಗುಂಪು ಉಪದಾನ | | 1,50,958 | 1,66,231 |
| **ಒಟ್ಟು** | **12** | **33,68,587** | **35,32,905** |
| **ಟಿಪ್ಪಣಿ 13 – ಇತರೆ ವೆಚ್ಚಗಳು** | | | |
| ಮುದ್ರಣ & ಸ್ಟೇಷನರಿ | | 1,16,173 | 57,193 |
| ಲೆಕ್ಕಪರಿಶೋಧನಾ ಶುಲ್ಕ | | 1,18,000 | 70,000 |
| ಸೌಹಾರ್ದಕ್ಕೆ ಪಾವತಿಸಿದ ಶುಲ್ಕ | | 59,000 | 59,000 |
| ದೂರವಾಣಿ ಶುಲ್ಕ | | 33,502 | 23,075 |
| ವಿದ್ಯುತ್ ಶುಲ್ಕ | | 36,897 | 39,205 |
| ಕಾನೂನು/ವೃತ್ತಿಪರ ಸಲಹಾ ಶುಲ್ಕ | | 79,750 | 26,500 |
| ಉಪಹಾರ | | 61,060 | 59,617 |
| ವೃತ್ತಿ ತೆರಿಗೆ | | 2,500 | 2,500 |
| ವಿಮಾ ಶುಲ್ಕ | | 70,192 | 33,455 |
| ಗಣಕಯಂತ್ರ ನಿರ್ವಹಣೆ | | 27,734 | 26,159 |
| ಕಛೇರಿ ನಿರ್ವಹಣೆ | | 24,000 | 24,000 |
| ಆಸ್ತಿ ತೆರಿಗೆ | | 16,403 | 16,403 |
| ಸುದ್ದಿಪತ್ರಿಕೆಗಳು ಮತ್ತು ನಿಯತಕಾಲಿಕೆಗಳು | | 1,540 | 1,850 |
| ದಾವೆ ಶುಲ್ಕ | | 90,773 | |
| ಇತರೆ ಶುಲ್ಕಗಳು | | 2,42,235 | 1,56,923 |
| **ಒಟ್ಟು** | **13** | **9,79,759** | **5,95,880** |

| ವಿವರಗಳು | ಟಿಪ್ಪಣಿ | 2024–25 | 2023–24 |
|---|---|---|---|
| **ಟಿಪ್ಪಣಿ 14 – ಸಾಲಗಳ ಮೇಲೆ ಸ್ವೀಕರಿಸಿದ ಬಡ್ಡಿ** | | | |
| ವ್ಯಾಪಾರ ಸಾಲ | | 2,66,81,404 | – |
| ಅಡಮಾನ ಸಾಲ | | 1,05,476 | 1,44,24,323 |
| ಚಿನ್ನದ ಸಾಲ | | 70,19,263 | 66,584 |
| ನಿರ್ಮಾಣ ಸಾಲ | | 1,40,297 | 59,60,547 |
| ಠೇವಣಿಗಳ ಮೇಲಿನ ಸಾಲ | | | 81,917 |
| ಮದುವೆ ಸಾಲ | | 48,889 | – |
| ಜಾಮೀನು ಸಾಲ | | 6,221 | 95,420 |
| ವಾಹನ ಸಾಲ | | 3,33,033 | 22,616 |
| ಮೀರೆಳೆತ | | – | 6,20,098 |
| ಶಿಕ್ಷಣ ಸಾಲ | | – | – |
| ಅನಿರ್ಬಂಧಿತ ಸಾಲ | | – | – |
| ಒಟ್ಟು | **14** | **3,43,34,583** | **2,12,71,505** |
| **ಟಿಪ್ಪಣಿ 15 – ಇತರೆ ಆದಾಯ** | | | |
| ಇ–ಸ್ಟ್ಯಾಂಪಿಂಗ್ ಕಮೀಷನ್ | | 915 | 751 |
| ಇತರೆ ಆದಾಯ | | 45,560 | 1,04,855 |
| ವಸೂಲಾದ ಅಂಚೆ ಶುಲ್ಕ | | 995 | 422 |
| ಒಟ್ಟು | **15** | **47,470** | **1,06,028** |
| **ಟಿಪ್ಪಣಿ 16 – ಆದಾಯ ಹಂಚಿಕೆ** | | | |
| **ಮೀಸಲು** | | | |
| ಮೀಸಲು ನಿಧಿ | | 73,21,507 | 40,76,423 |
| ಮಹೋತ್ಸವ ನಿಧಿ | | 1,00,000 | 25,000 |
| ಮರಣ ಪರಿಹಾರ ನಿಧಿ | | 50,000 | 50,000 |
| ಸಾಮಾನ್ಯ ಕ್ಷೇಮಾಭಿವೃದ್ಧಿ ನಿಧಿ | | 14,64,301 | 8,15,285 |
| ಸಹಕಾರ ನಿಧಿ 5% | | 1,46,430 | 81,528 |
| ಕಟ್ಟಡ ನಿಧಿ | | 75,00,000 | 20,00,000 |
| ವಸೂಲಾತಿಯಾಗದ ಸಾಲಗಳ ನಿಧಿ | | 55,000 | 5,00,000 |
| ಕಾರ್ಯನಿರ್ವಹಣಾ ಮೀಸಲು ನಿಧಿ | | 58,57,206 | 32,61,139 |
| ಕೊರತೆ ನೀಗುವಿಕೆ ನಿಧಿ | | 20,60,510 | 10,59,941 |
| ನೌಕರರ ಕ್ಷೇಮಾಭಿವೃದ್ಧಿ ನಿಧಿ | | 70,000 | 50,000 |
| ಸಹಕಾರಿ ಶಿಕ್ಷಣ ನಿಧಿ | | 5,85,721 | 3,26,114 |
| ನೌಕರರ ಬೋನಸ್ | | 4,23,353 | 4,99,530 |
| ಒಟ್ಟು | **16** | **2,56,34,028** | **1,27,44,960** |

## ಸುಪ್ರಜ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್

ನಂ. 658/2ಎ, 2ನೇ ಮಹಡಿ, ಶ್ರೀ ಕೃಷ್ಣ ಕಾಂಪ್ಲೆಕ್ಸ್, ಬಸೆಟ್ಟಿಪೇಟೆ, ಚಿಕ್ಕಪೇಟೆ ಕ್ರಾಸ್, ಬೆಂಗಳೂರು – 560 053.

**ಟಿಪ್ಪಣಿ – 5 ಸ್ಥಿರ ಆಸ್ತಿಗಳು**

| ವಿವರಣೆ | ಸಮಗ್ರ ಕಂಡಿಕೆ | | | | ಸವಕಳಿ | | | | ನಿವ್ವಳ ಕಂಡಿಕೆ | |
|---|---|---|---|---|---|---|---|---|---|---|
| | 01–04–2024 ರಂತೆ | ಸೇರ್ಪಡೆಗಳು | ಸೇರ್ಪಡೆಗಳು | 31–03–2025 ರಂತೆ | ದರ | 01–04–2024 ರಂತೆ | ಸಾಲಿಗೆ | 31–03–2025 ರಂತೆ | 31–03–2025 ರಂತೆ | 31–03–2024 ರಂತೆ |
| ಕಟ್ಟಡ | 15,94,600 | – | – | 15,94,600 | 10% | 13,89,963 | 20,464 | 14,10,427 | 1,84,174 | 2,04,637 |
| ಪೀಠೋಪಕರಣಗಳು | 12,06,290 | – | 37,656 | 12,43,946 | 10% | 8,30,114 | 39,500 | 8,69,614 | 3,74,332 | 3,76,176 |
| ವಿದ್ಯುತ್ ಉಪಕರಣಗಳು | 2,81,759 | – | 10,620 | 2,92,379 | 10% | 1,95,823 | 9,125 | 2,04,947 | 87,432 | 85,936 |
| ಗಣಕಯಂತ್ರಗಳು | 9,71,968 | – | – | 9,71,968 | 40% | 8,58,638 | 45,333 | 9,03,971 | 67,997 | 1,13,330 |
| ತಂತ್ರಾಂಶ | 2,58,063 | – | – | 2,58,063 | 40% | 2,14,125 | 17,575 | 2,31,700 | 26,363 | 43,938 |
| ವಾಹನಗಳು | 1,53,154 | – | – | 1,53,154 | 15% | 87,703 | 9,818 | 97,521 | 55,633 | 65,451 |
| ನಗದು ಎಣಿಕೆ ಯಂತ್ರ | 41,488 | – | 28,200 | 69,688 | 15% | 33,511 | 3,312 | 36,822 | 32,866 | 7,977 |
| ಮೊಬೈಲ್ ಫೋನ್ | 21,500 | – | – | 21,500 | 15% | 11,906 | 1,439 | 13,346 | 8,154 | 9,594 |
| ಏರ್ ಕಂಡಿಷನರ್ | 88,000 | – | – | 88,000 | 15% | 70,675 | 2,599 | 73,274 | 14,726 | 17,325 |
| ಸಿಸಿ ಕ್ಯಾಮೆರಾ | 50,812 | – | – | 50,812 | 15% | 24,481 | 3,950 | 28,431 | 22,381 | 26,331 |
| ಒಟ್ಟು | **46,67,634** | – | **76,476** | **47,44,110** | | **37,16,938** | **1,53,114** | **38,70,053** | **8,74,058** | **9,50,696** |

**ಲೆಕ್ಕಪರಿಶೋಧಕರಾದ ಹೆಚ್. ಶಿವಕುಮಾರ್‌ರವರು ನಮ್ಮ ಸಹಕಾರಿಯ 2024–25ನೇ ಸಾಲಿನ ಲೆಕ್ಕ ಪರಿಶೋಧನೆ ಮಾಡಿದ್ದು. ಪ್ರಸಕ್ತ ಸಾಲಿನಲ್ಲಿ 'ಎ' ವರ್ಗವೆಂದು ವರ್ಗೀಕರಿಸಿರುತ್ತಾರೆ.**

## ಕಾರ್ಯಸೂಚಿ 09

## 2024–2025ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯ ಅನುಪಾಲನಾ ವರದಿಯನ್ನು ಅನುಮೋದಿಸುವುದು.

**1) ಸಂಖ್ಯೆ 26 ಸದಸ್ಯರ ಸಾಲ ಮತ್ತು ಮುಂಗಡಗಳು**

**ಲೆಕ್ಕ ಪರಿಶೋಧನೆಯಲ್ಲಿ ನಿಯಮಾನುಸಾರ ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರ ಪರಿಶೀಲಿಸಿ ಸರಿ/ತಪ್ಪು ಇರುವ ಬಗ್ಗೆ ಅಂಕಿ ಸಂಖ್ಯೆಗಳೊಂದಿಗೆ ಪರಿಶೀಲಿಸಿ ಲೆಕ್ಕಾಚಾರದ ತಃಖ್ತೆಯನ್ನು ವರದಿಗೆ ಲಗತ್ತಿಸುವುದು.**

**ಲೆಕ್ಕ ಪರಿಶೋಧನಾ ವರದಿ:**

ಲೆಕ್ಕ ಪರಿಶೋಧನಾ ವೇಳೆಯಲ್ಲಿ ಶ್ರೀ ಬಿ.ಕೆ ರಾಮ್‌ಮೋಹನ್‌ರವರ ಸಾಲದ ಖಾತೆ ಸಂಖ್ಯೆ 93(ಅಡಮಾನ ಸಾಲ) ನ್ಯಾಯಾಲಯದಲ್ಲಿ ಇವರಿಂದ ರೂ.235.00 ಲಕ್ಷ ಮತ್ತು ಮುಂದುವರಿದ ಬಡ್ಡಿಗೆ ಆದೇಶವಾಗಿದ್ದರು ಸಹ ಸಭೆಯ ಸಂಖ್ಯೆ 4 ದಿನಾಂಕ 11–07–2024ರಂದು ನಡೆದ ನಿರ್ದೇಶಕ ಮಂಡಳಿ ಸಭೆಯಲ್ಲಿ ಇವರಿಂದ ರೂ.211 ಲಕ್ಷಗಳನ್ನು ಕಟ್ಟಿಸಿಕೊಂಡು ಸಾಲ ಮುಕ್ತಾಯ ಮಾಡಿರುತ್ತಾರೆ. ನ್ಯಾಯಾಲಯದ ಆದೇಶಕ್ಕಿಂತ ಕಡಿಮೆ ಮೊತ್ತ ಪಾವತಿಸಿಕೊಂಡು ಸಾಲ ಮುಕ್ತಾಯ ಮಾಡಿರುತ್ತಾರೆ.

ಶ್ರೀಮತಿ ಎಸ್.ಪರಿಮಳ ಸಾಲದ ಖಾತೆ ಸಂಖ್ಯೆ 148(ಅಡಮಾನ ಸಾಲ) ನ್ಯಾಯಾಲಯದಲ್ಲಿ ಇವರಿಂದ ರೂ.34.00 ಲಕ್ಷ ಮತ್ತು ಮುಂದುವರಿದ ಬಡ್ಡಿಗೆ ಆದೇಶವಾಗಿದ್ದರು ಸಹ ಸಭೆಯಲ್ಲಿ ಇವರಿಂದ ರೂ.31.29ಗಳನ್ನು ಕಟ್ಟಿಸಿಕೊಂಡು ಸಾಲ ಮುಕ್ತಾಯ ಮಾಡಿರುತ್ತಾರೆ. ನ್ಯಾಯಾಲಯದ ಆದೇಶಕ್ಕಿಂತ ಕಡಿಮೆ ಮೊತ್ತ ಪಾವತಿಸಿಕೊಂಡು ಸಾಲ ಮುಕ್ತಾಯ ಮಾಡಿರುತ್ತಾರೆ.

**ಅನುಪಾಲನಾ ವರದಿ:**

ಶ್ರೀ.ಬಿ.ಕೆ. ರಾಮಮೋಹನ್‌ರವರಿಗೆ ಅವರ ಸ್ಥಿರಾಸ್ತಿ ಆಧಾರಿತ ಸಾಲವಾಗಿ 24–09–2015ರಲ್ಲಿ ರೂ. 100 ಲಕ್ಷ ಸಾಲ ನೀಡಿತ್ತು. ಇವರು ನಡೆಸುತ್ತಿದ್ದ ಗ್ರಾನೈಟ್ ಫ್ಯಾಕ್ಟರಿ ನಷ್ಟ ಅನುಭವಿಸಿ ಇವರು ಸಾಲದ ಕಂತುಗಳಾಗಲಿ ಮತ್ತು ಬಡ್ಡಿಯನ್ನಾಗಲಿ ಪಾವತಿಸದೆ ದೀರ್ಘ ಸುಸ್ತಿದಾರರಾಗಿದ್ದರು. ಸಹಕಾರಿಯ ಎಲ್ಲಾ ಸಾಲ ವಸೂಲಾತಿ ಕ್ರಮಗಳಿಂದ ಇವರಿಂದ ಕೇವಲ ಅಸಲು ಕಂತು 3.22 ಲಕ್ಷ ಮಾತ್ರ ವಸೂಲಾತಿಯಾಗಿತ್ತು. ಇವರು ಸಾಲಕ್ಕೆ ಬೋಗ್ಯ ಮಾಡಿದ್ದ ಸ್ಥಿರಾಸ್ತಿಯನ್ನು ಸಹಾ ಬೇರೆಯವರಿಗೆ ಲೀಸ್ ಮಾಡಿದ್ದರು ಹಾಗೂ ಬಾಡಿಗೆದಾರರಿಂದ ಹೆಚ್ಚುವರಿ ಅಡ್ವಾನ್ಸ್ ಪಡೆದಿದ್ದರು. ಇವರಿಂದ ಪೂರ್ತಿ ಸಾಲ ವಸೂಲಾತಿ ಬಹಳ ಕಷ್ಟವೆಂದು ಸಹಕಾರಿಗೆ ತಿಳಿದಾಕ್ಷಣ ಈ ಸಾಲಕ್ಕೆ ಜಾಮೀನುದಾರರಾಗಿದ್ದ ಶ್ರೀ.ಪಿ.ಎಂ ಜಯರಾಂರವರ ಮೇಲೆ ಸಾಲ ವಸೂಲಾತಿ ಕ್ರಮಕ್ಕೊಸ್ಕರ ಚೆಕ್ ಬೌನ್ಸ್ ಕೇಸ್ ದಾಖಲಿಸಿ ಕೋರ್ಟ್‌ನಲ್ಲಿ ಇವರು ರೂ. 234 ಲಕ್ಷ ಕಟ್ಟಬೇಕೆಂದು ಆದೇಶಿಸಿತ್ತು. ಜಾಮೀನುದಾರರಾದ ಶ್ರೀ ಪಿ.ಎಂ.ಜಯರಾಂರವರು ಬಡ್ಡಿಯಲ್ಲಿ ವಿನಾಯಿತಿ ನೀಡಿದರೆ ಪೂರ್ತಿ ಸಾಲವನ್ನು ಒಮ್ಮೆಲೇ ಓ.ಟಿ.ಎಸ್ ಮುಖಾಂತರ ತೀರಿಸುವುದಾಗಿ ಮಾತುಕತೆ ಮಾಡಿ ಹಲವಾರು ಮೀಟಿಂಗ್‌ಗಳ ನಂತರ, ಸಹಕಾರಿಯ ಕಾನೂನು ಸಲಹೆಗಾರರು ತಿಳಿಸಿದಂತೆ ಅಸಲಿಗಿಂತ ಬಡ್ಡಿ ಹಣ ಜಾಸ್ತಿ ಇರುವುದರಿಂದ ಶ್ರೀ.ಪಿ.ಎಂ.ಜಯರಾಂರವರು ಮತ್ತೆ ಕೋರ್ಟ್ ಮುಂದೆ ಪ್ರಾರ್ಥಿಸಿದರೆ ಬಡ್ಡಿ ರಿಯಾಯಿತಿ ನೀಡಿ ಎಂದು ಕೋರ್ಟ್ ಆದೇಶಿಸಬಹುದು ಎಂಬ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಸಹಕಾರಿಯ ಸಾಲ ವಸೂಲಾತಿ ಸಮಿತಿ ಹಾಗೂ ನಿರ್ದೇಶಕ ಮಂಡಳಿ ಸಭೆಯು ಇವರಿಂದ ಅಸಲು ರೂ. 97 ಲಕ್ಷ ಮತ್ತು ಬಡ್ಡಿ ರೂ. 114 ಲಕ್ಷ (ಈ ಮೊತ್ತವು ಸಾಲಿಯಾನ ಶೇ. 13% ರ ಬಡ್ಡಿದರದಂತೆ ದೊರೆಕಿದ್ದು, ಇದು ಸಹಕಾರಿಯು ಈಗ ಹೊಸದಾಗಿ ಸಾಲ ಪಡೆಯುವ ಸದಸ್ಯರಿಗೆ ವಿಧಿಸುತ್ತಿರುವ ಬಡ್ಡಿಯ ದರ ಸಾಲಿಯಾನ ಶೇ. 12% ಕ್ಕಿಂತ ಹೆಚ್ಚಾಗಿ ದೊರೆತಿದೆ). ಒಟ್ಟು ರೂ. 211 ಲಕ್ಷ ಕಟ್ಟಿಸಿಕೊಂಡು ಸಹಕಾರಿಯು ಈ ದೀರ್ಘವಾಗಿ ಸುಸ್ತಿಯಾಗಿದ್ದ ಅನುಮಾನಾಸ್ಪದ ಸಾಲವನ್ನು ತೀರುವಳಿ ಮಾಡಿಕೊಂಡಿತ್ತು.

ಶ್ರೀಮತಿ.ಎಸ್.ಪರಿಮಳ ರವರಿಗೆ ಅವರ ಸ್ಥಿರಾಸ್ತಿ ಆಧಾರಿತ ಸಾಲವಾಗಿ ದಿನಾಂಕ 14.02.2019 ರಲ್ಲಿ ರೂ. 25,00,000/– ಸಾಲ ನೀಡಿತ್ತು. ಶ್ರೀಮತಿ ಎಸ್. ಪರಿಮಳರವರ ಕುಟುಂಬದ ಸದಸ್ಯರಲ್ಲೇ ಆರೋಗ್ಯ ಸಮಸ್ಯೆ ಹಾಗೂ ಇವರ ಪತಿ ಜಾಮೀನುದಾರರಾದ ಶ್ರೀ ಎನ್. ಸೂರ್ಯಪ್ರಕಾಶ್ ರವರು ನಡೆಸುತ್ತಿದ್ದ ಫ್ಯಾಕ್ಟರಿ ಸಂಪೂರ್ಣವಾಗಿ ನಷ್ಟ ಅನುಭವಿಸಿದ ಹಿನ್ನಲೆಯಲ್ಲಿ ಇವರು ಸಹಕಾರಿಗೆ ಕಟ್ಟಬೇಕಾದ ಅಸಲು ಕಂತುಗಳನ್ನು ಕಟ್ಟದೇ ಸುಸ್ತಿದಾರರಾದರು. ಇವರ ಸುಸ್ತಿ ಸಾಲ ಖಾತೆಯ ವಸೂಲಾತಿಗೆ ಕಾನೂನುಕ್ರಮವನ್ನು ಜಾರಿ ಮಾಡಲಾಗಿತ್ತು, ನ್ಯಾಯಲಯದಲ್ಲಿ ಪಾವತಿಸದಿದ್ದಲ್ಲಿ ಬಂಧನಗೊಳಿಸುವಂತೆ ಆದೇಶ ಮಾಡಿತ್ತು. ಆಗ ಶ್ರೀಮತಿ. ಎಸ್. ಪರಿಮಳ ರವರು ಮತ್ತು ಅವರ ಸಹೋದರ ಸಹಕಾರಿಗೆ ಬಂದು ಓ.ಟಿ.ಎಸ್ ನೀಡಿದ್ದರೆ ಒಂದೇ ಬಾರಿ ಸಾಲ ಮುಕ್ತಾಯ ಮಾಡುತ್ತೇವೆಂದು ಮನವಿ ಮಾಡಿದ ಹಿನ್ನಲೆಯಲ್ಲಿ ಅವರ ಮನವಿಯು ನೈಜವಾಗಿರುವುರಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ ಸಾಲದ ಉಪಸಮಿತಿ ಸಭೆ ಹಾಗೂ ನಿರ್ದೇಶಕ ಮಂಡಳಿ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ಇವರಿಗೆ ಬಡ್ಡಿಯಲ್ಲಿ ವಿನಾಯಿತಿ ನೀಡಿ ಇವರಿಂದ ಅಸಲು ರೂ.24 ಲಕ್ಷ ಮತ್ತು ಬಡ್ಡಿ ರೂ.7.15 ಲಕ್ಷ ಒಟ್ಟು ರೂ.31.15 ಲಕ್ಷ ಕಟ್ಟಿಸಿಕೊಂಡು ಸಾಲವನ್ನು ತೀರುವಳಿ ಮಾಡಿಕೊಳ್ಳಲಾಯಿತು.

**ಸಂಖ್ಯೆ 35 ಲೆಕ್ಕ ಪರಿಶೋಧಕರ ಸಲಹೆ ಹಾಗೂ ಸೂಚನೆಗಳು.**

1. ಸಹಕಾರಿ ಇತರೆ ಬ್ಯಾಂಕುಗಳಲ್ಲಿ ಹೆಚ್ಚುವರಿ ಹೂಡಿಕೆ ಮಾಡುವ ಬದಲಾಗಿ ಸದಸ್ಯರಿಗೆ ಸಾಲ ವಿತರಣೆ ಮಾಡುವ ಕಡೆ ಹೆಚ್ಚು ಗಮನಹರಿಸಬೇಕಾಗುತ್ತದೆ.
2. ಸಹಕಾರಿಯ ನೀಡುವ ಸಾಲದ ವ್ಯವಹಾರದಲ್ಲಿ ಹೆಚ್ಚು ಸದಸ್ಯರ ಪಾಲ್ಗೊಳ್ಳುವಂತೆ ಕ್ರಮ ಕೈಗೊಳ್ಳುವುದು.

**ಅನುಪಾಲನಾ ವರದಿ:**

1. ಸಹಕಾರಿ ಬ್ಯಾಂಕ್‌ಗಳು ಮತ್ತು ಷೆಡ್ಯೂಲ್ ಬ್ಯಾಂಕ್‌ಗಳು ಸಾಲಗಳಿಗೆ ವಿಧಿಸುತ್ತಿರುವ ಕಡಿಮೆ ಬಡ್ಡಿದರದ ಕಾರಣ ಸಾಲ ಕೋರಿ ಬರುತ್ತಿರುವ ಅರ್ಜಿಗಳು ಕಡಿಮೆಯಾಗಿದ್ದು ಹಾಗೂ ನಮ್ಮ ಸಹಕಾರಿಯ ಸಾಲ ನಿಯಮಾವಳಿಗಳಿಗೆ ಅನುಸಾರವಾಗಿ ಸಾಲಗಾರ ಮರುಪಾವತಿ ಶಕ್ತಿ, ಅವರ ಮತ್ತು ಸ್ಥಿರಾಸ್ತಿಯ ಮೂಲದಾಖಲಾತಿಗಳ ತೀಕ್ಷ್ಣ ಪರೀಕ್ಷೆಯಿಂದಾಗಿ ಸಾಲಕ್ಕಾಗಿ ಬಂದ ಎಲ್ಲ ಅರ್ಜಿಗಳನ್ನು ಪರಿಗಣಿಸಲು ಸಾಧ್ಯವಾಗುತ್ತಿಲ್ಲ. ಇನ್ನು ಮುಂದೆ ಸಾಲ ವಿತರಣೆ ಮಾಡುವ ಕಡೆ ಹೆಚ್ಚಿನ ಗಮನ ಹರಿಸಲಾಗುತ್ತದೆ.
2. ಸದಸ್ಯರ ಪಾಲ್ಗೊಳ್ಳುವಿಕೆ ಕಡೆ ಈಗಾಗಲೇ ಹೊಸ ಸಾಲ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಸತತ ಪ್ರಯತ್ನ ಮಾಡಲಾಗುತ್ತದೆ.

## ಕಾರ್ಯಸೂಚಿ – 10

## 2024–25ನೇ ಸಾಲಿನ ನಿವ್ವಳ ಲಾಭದ ವಿಲೇವಾರಿಯನ್ನು ಅನುಮೋದಿಸುವುದು

ಸಹಕಾರಿಯ 2024–25ನೇ ಸಾಲಿನಲ್ಲಿ ರೂ. 2,92,86,028/–ಗಳ ನಿವ್ವಳ ಲಾಭವನ್ನು ಗಳಿಸಿದ್ದು, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, ಉಪನಿಬಂಧನೆಗಳ ಪ್ರಕಾರ ವಿಲೇವಾರಿ ಮಾಡಿ ಹಾಗೂ ಸದಸ್ಯರಿಗೆ ಶೇ. 25% ರಂತೆ ಲಾಭಾಂಶವನ್ನು ವಿಲೇವಾರಿ ಮಾಡಲು ಅನುಮೋದನೆಗಾಗಿ ಸಾಮಾನ್ಯ ಸದಸ್ಯರ ಸಭೆಗೆ ಮಂಡಿಸಲಾಗಿದೆ.

ರೂ.(ಲಕ್ಷಗಳಲ್ಲಿ)

| ಕ್ರ.ಸಂ. | ನಿಧಿಗಳ ವಿವರ | ಶೇಕಡಾವಾರು % | ಉದ್ದೇಶಿತ ವಿಲೇವಾರಿ ಮೊಬಲಗು |
|---|---|---|---|
| 1 | ಮೀಸಲು ನಿಧಿ | 25% | 73,21,507 |
| 2 | ಸಂಯುಕ್ತ ಸಹಕಾರಿ ಶಿಕ್ಷಣ ನಿಧಿ | 2% | 5,85,721 |
| 3 | ಕಾರ್ಯಾಚರಣ ಮೀಸಲು ನಿಧಿ | 20% | 58,57,206 |
| 4 | ಸಾಮಾನ್ಯ ಕ್ಷೇಮ ನಿಧಿ | 5% | 14,64,301 |
| 5 | ಸಹಕಾರ ಅಕಾಡೆಮಿ | 0.5% | 1,46,430 |
| 6 | ನೌಕರರಿಗೆ ಬೋನಸ್ (2 ತಿಂಗಳ ವೇತನ) | | 4,23,353 |
| 7 | ಕಟ್ಟಡ ನಿಧಿ | | 75,00,000 |
| 8 | ಮರಣ ಪರಿಹಾರ ನಿಧಿ | | 50,000 |
| 9 | ಕೊರತೆ ನಿಭಾವಣಾ ನಿಧಿ | | 20,60,510 |
| 10 | ಜ್ಯೂಬಿಲಿ ನಿಧಿಗೆ | | 1,00,000 |
| 11 | ನೌಕರರ ಕ್ಷೇಮಾಭಿವೃದ್ಧಿ ನಿಧಿ | | 70,000 |
| 12 | ಅನುಮಾನಸ್ಪದ ಸಾಲಗಳಿಗೆ | | 55,000 |
| | **ಒಟ್ಟು (ರೂ.)** | | 2,56,34,028 |
| 13 | ಸದಸ್ಯರ ಲಾಭಾಂಶ (ಡಿವಿಡೆಂಡ್) | 25% | 36,52,000 |
| | **ಒಟ್ಟು (ರೂ.)** | | **2,92,86,028** |

## ಕಾರ್ಯಸೂಚಿ – 11

**2025–26ನೇ ಸಾಲಿನ ಲೆಕ್ಕ ಪತ್ರಗಳ ಪರಿಶೋಧನೆಗಾಗಿ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು**

ಲೆಕ್ಕಪರಿಶೋಧಕರ ನೇಮಕಕ್ಕೆ ಅನುಮೋದನೆ ನೀಡುವ ಪ್ರಮುಖ ಪಾತ್ರವನ್ನು ಸಾಮಾನ್ಯ ಸದಸ್ಯರ ಸಭೆಯಲ್ಲಿ ಸದಸ್ಯರುಗಳೇ ವಹಿಸುತ್ತಾರೆ. ಈಗಾಗಲೇ ನಮಗೆ ಈ ಕೆಳಕಂಡಂತೆ ಮೂರು ಲೆಕ್ಕಪರಿಶೋಧಕರಿಂದ ಪ್ರಸ್ತಾವನೆಗಳು ಬಂದಿರುತ್ತದೆ.

1. ಹೆಚ್. ಶಿವಕುಮಾರ್, ಲೆಕ್ಕಪರಿಶೋಧಕರು
2. ಎನ್. ಎನ್. ಸೋಮೇಶ್, ಲೆಕ್ಕಪರಿಶೋಧಕರು
3. ಸಿ.ಆರ್. ನೂಲ್ವಿ ಅಂಡ್ ಅಸೋಸಿಯೇಟ್ಸ್

ಇವರಲ್ಲಿ ಯಾರಾದರೂ ಒಬ್ಬರನ್ನು ಆಯ್ಕೆ ಮಾಡುವಂತೆ ಸಾಮಾನ್ಯ ಸದಸ್ಯರ ಸಭೆಯ ತೀರ್ಮಾನಕ್ಕೆ ಬಿಡಲಾಗಿದೆ. ಹಾಗೂ ಇವರಿಗೆ ನೀಡಬಹುದಾದ ಸಂಭಾವನೆಯ ಬಗ್ಗೆ ಕೂಡ ಸಾಮಾನ್ಯ ಸದಸ್ಯರ ವಾರ್ಷಿಕ ಮಹಾಸಭೆಯ ತೀರ್ಮಾನಕ್ಕೆ ಮಂಡಿಸಲಾಗಿದೆ.

## ಕಾರ್ಯಸೂಚಿ – 12

### 2024-25ನೇ ಸಾಲಿನ ಬಜೆಟ್‌ನ ಹೆಚ್ಚು/ಕಡಿಮೆ ವಾಸ್ತವಿಕ ಖರ್ಚಿನ ಅನುಮೋದನೆ ಹಾಗೂ 2025-26ನೇ ಸಾಲಿನ ವಾರ್ಷಿಕ ಮುಂಗಡ ಪತ್ರ(ಬಜೆಟ್) ಅನುಮೋದನೆ. (ಲಕ್ಷ ರೂಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 31.03.2025 ಬಡ್ಜೆಟ್‌ನಲ್ಲಿದ್ದಂತೆ | 31.03.2025 ರಲ್ಲಿದ್ದಂತೆ | ಬಡ್ಜೆಟ್ ವ್ಯತ್ಯಾಸ | 31.03.2026 ಬಡ್ಜೆಟ್ | ಕ್ರಮ ಸಂಖ್ಯೆ | ವಿವರಗಳು | 31.03.2025 ಬಡ್ಜೆಟ್‌ನಲ್ಲಿದ್ದಂತೆ | 31.03.2025 ರಲ್ಲಿದ್ದಂತೆ | ಬಡ್ಜೆಟ್ ವ್ಯತ್ಯಾಸ | 31.03.2026 ಬಡ್ಜೆಟ್ |
|---|---|---|---|---|---|---|---|---|---|---|---|
| | **ಸದಸ್ಯತ್ವ** | | | | | | **ಆದಾಯ** | | | | |
| I ಆ | ಸದಸ್ಯರ ಸಂಖ್ಯೆ | 2400 | 2293 | –107 | 2350 | | ಸದಸ್ಯರುಗಳಿಂದ ಸಾಲಗಳಿಂದ ಬಡ್ಡಿ | 310.00 | 348.78 | 38.78 | 300.00 |
| | ಒಟ್ಟು | 2400 | 2293 | –107 | 2350 | | ಹೂಡಿಕೆಯಿಂದ ಬಡ್ಡಿ | 130.00 | 142.24 | 12.24 | 125.00 |
| | **ಷೇರು ಬಂಡವಾಳ** | | | | | | ಸದಸ್ಯರುಗಳಿಂದ ಸೇವಾಶುಲ್ಕ | 7.00 | 2.53 | –4.47 | 3.00 |
| ಅ | ಸದಸ್ಯರಿಂದ | 150.00 | 146.13 | –3.87 | 150.00 | | ಷೇರು ಶುಲ್ಕ | 2.00 | 0.42 | –1.58 | 1.00 |
| | ಒಟ್ಟು | **150.00** | **146.13** | **–3.87** | **150.00** | | ಇತರೆ | 6.00 | 21.36 | 15.36 | 21.00 |
| ii | **ಠೇವಣಿಗಳು** | | | | | | ಒಟ್ಟು | **455.00** | **515.33** | **60.33** | **450.00** |
| 1 | ಉಳಿತಾಯ ಖಾತೆ | 500.00 | 524.62 | 24.62 | 550.00 | | **ಖರ್ಚುಗಳು** | | | | |
| 2 | ಆವರ್ತನ ಖಾತೆ | 45.00 | 22.48 | –22.52 | 45.00 | | ಠೇವಣಿ ಮೇಲಿನ ಬಡ್ಡಿ | 190.00 | 173.70 | –16.30 | 170.00 |
| 3 | ಖಾಯಂ ಠೇವಣಿ ಖಾತೆ | 1400.00 | 1163.16 | –236.84 | 1300.00 | | ಸಿಬ್ಬಂದಿ ವೆಚ್ಚ | 40.00 | 30.12 | –9.88 | 42.00 |
| 4 | ಮರುಹೂಡಿಕೆ ಖಾತೆ | 1050.00 | 927.71 | –122.29 | 1100.00 | | ಮುದ್ರಣ ಲೇಖನಿ | 2.00 | 0.40 | –1.60 | 3.00 |
| 5 | ಸುಪ್ರಜ ನಗದು ಪತ್ರ ಖಾತೆ | 5.00 | 2.02 | –2.98 | 5.00 | | ಸಾಮಾನ್ಯ ಸದಸ್ಯರ ಸಭೆಗಳು | 5.75 | 5.51 | –0.24 | 8.00 |
| | ಒಟ್ಟು | **3000.00** | **2639.99** | **–360.01** | **3000.00** | | ನಿರ್ದೇಶಕ ಹಾಗೂ ಇತರೆ ಉಪಸಮಿತಿ ಸಭೆಗಳು | 1.25 | 2.74 | 1.49 | 4.00 |
| iii | **ಸಾಲ/ಮುಂಗಡಗಳು** | | | | | | ಅಂಚೆ ವೆಚ್ಚ | 1.00 | –0.01 | –1.01 | 1.50 |
| 1 | ವೈಯುಕ್ತಿಕ ಸಾಲ | 5.00 | 2.99 | –2.01 | 6.00 | | ವಿದ್ಯುಚ್ಛಕ್ತಿ | 0.50 | 0.30 | –0.20 | 0.50 |
| 2 | ಕಟ್ಟಡ ಸಾಲ | 600.00 | 691.06 | 91.06 | 700.00 | | ದೂರವಾಣಿ | 0.50 | 0.33 | –0.17 | 0.50 |
| 3 | ವ್ಯಾಪಾರ ಸಾಲ | 100.00 | 0.00 | –100.00 | 75.00 | | ವಸೂಲಾತಿ/ವಾಹನ/ ಲೀಗಲ್ | 2.00 | 1.02 | –0.98 | 2.00 |
| 4 | ಆಭರಣ ಸಾಲ | 20.00 | 36.36 | 16.36 | 50.00 | | ವಿಮೆ | 0.70 | 0.70 | 0.00 | 1.50 |
| 5 | ವಾಹನ ಸಾಲ | 10.00 | 0.00 | –10.00 | 20.00 | | ಇತರೆ ಸವಕಳಿ | 2.00 | 1.53 | –0.47 | 2.00 |
| 6 | ಠೇವಣಿ ಆಧಾರಿತಸಾಲ | 30.00 | 28.77 | –1.23 | 50.00 | | ಮೀರೆಳೆತ ಸಾಲದ ಬಡ್ಡಿ | 1.00 | 0.00 | –1.00 | 1.00 |
| 7 | ಮೀರೆಳೆತ ಸಾಲ | 60.00 | 53.05 | –6.95 | 70.00 | | ಲೆಕ್ಕ ಪರಿಶೋಧನಾ | 0.70 | 0.70 | 0.00 | 2.00 |
| 8 | ಮದುವೆ ಸಾಲ | 10.00 | 0.00 | –10.00 | 20.00 | | ಇತರೆ | 3.00 | 3.22 | 0.22 | 4.00 |
| 9 | ವಿದ್ಯಾಭ್ಯಾಸ ಸಾಲ | 25.00 | 0.00 | –25.00 | 25.00 | | ಕಟ್ಟಡ ನಿರ್ವಹಣೆ | 1.50 | 1.42 | –0.08 | 1.80 |
| 10 | ಅಡಮಾನ ಸಾಲ | 1940.00 | 1323.92 | –616.08 | 1384.00 | | ಕಂಪ್ಯೂಟರ್ ಅಭಿವೃದ್ಧಿ | 1.50 | 0.28 | –1.22 | 1.00 |
| | ಒಟ್ಟು | 2800.00 | 2136.15 | –663.85 | 2400.00 | | ಆಸ್ತಿ ತೆರಿಗೆ ಪಾವತಿ | 0.17 | 0.16 | –0.01 | 0.20 |
| iv | **ಹೂಡಿಕೆಗಳು** | 1800.00 | 1918.18 | 118.18 | 2000.00 | | ಚುನಾವಣಾ ಖರ್ಚು | 0.00 | 0.00 | 0.00 | 5.00 |
| | | | | | | | | **253.57** | **222.12** | **–31.45** | **250.00** |
| | **ಒಟ್ಟು** | **1800.00** | **1918.18** | **118.18** | **2000.00** | | **ಒಟ್ಟು** | **201.43** | **293.21** | **91.78** | **200.00** |